ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನಾಚರಣೆ ಮಾಡಬೇಕೆಂದು ಕೋರುತ್ತೇನೆ.

(ಸದನದಲ್ಲಿ ಮಾನ್ಯ ಸದಸ್ಯರುಗಳು ಒಂದು ನಿಮಿಷ ಮೌನಾಚರಣೆ ಮಾಡಿದರು)

2. ಅರ್ಜಿಯನ್ನೊಪ್ಪಿಸುವುದು.

ವಿಷಯ : ಎಂಡೋಸಲ್ಫಾನ್ ವೈಮಾನಿಕ ಸಿಂಪಡಣೆಯಿಂದ ತೊಂದರೆ.

ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) :- ಮಾನ್ಯ ಸಭಾಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕಿನ ಕೊಕ್ಕಡ ಮತ್ತು ಪಟ್ರಮೆ ಗ್ರಾಮಗಳಲ್ಲಿ ಗೇರು ಕೃಷಿಗೆ ಮಾಡಲಾದ ಎಂಡೋಸಲ್ಫಾನ್ ವೈಮಾನಿಕ ಸಿಂಪಡಣೆಯಿಂದ ತೊಂದರೆಯಾಗಿರುವ ಸಾರ್ವಜನಿಕರಿಗೆ ಪರಿಹಾರ ಒದಗಿಸುವ ಬಗ್ಗೆ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

3. ಹಕ್ಕುಚ್ಯುತಿ ಪ್ರಸ್ತಾವ

ವಿಷಯ : ಆಯವ್ಯಯದ ಪಾವಿತ್ರ್ಯತೆಗೆ ಉಂಟಾಗಿರುವ ಭಂಗ ಬಗ್ಗೆ.

ಶ್ರೀ ಎನ್. ಧರಂಸಿಂಗ್ (ಮಾನ್ಯ ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ನಿರ್ಣಯವನ್ನು ನಾನು ಮೊನ್ನೆ ಪ್ರಸ್ತಾಪ ಮಾಡಿದ್ದೇನೆ. ಆ ದಿವಸ ಯಡಿಯೂರಪ್ಪನವರು ವಿಧಾನಪರಿಷತ್ತಿನಲ್ಲಿದ್ದ ಕಾರಣ ತಡವಾಗಿ ಬಂದರು. ತಮ್ಮ ಕೊಠಡಿಯಲ್ಲಿ ಚರ್ಚೆಯಾಗಿದೆ. 9 ಮತ್ತು 10ನೇ ತಾರೀಖು ಬಿ.ಜೆ.ಪಿ.ಯ ವಿಕಾಸಯಾತ್ರೆಯಲ್ಲಿ ಅವರು ನಿರತರಾದ ಕಾರಣ 11ನೇ ತಾರೀಖು ಮಂಡಿಸಿ ಎಂದು ಹೇಳಿದ್ದರು. ಈ ದಿನ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇದ್ದಾರೆ. ಯಡಿಯೂರಪ್ಪನವರು ಕೂಡ ಈ ರಾಜ್ಯದ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರೂ ಆಗಿದ್ದಾರೆ. ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ನನಗೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಬಜೆಟ್ ಮಂಡನೆ 16ನೇ ತಾರೀಖು ಆಯಿತು, ಮೂರು ದಿನಗಳ ಕಾಲ ಚರ್ಚೆಯಾಗಿ ಕೊನೆಯದಾಗಿ ಯಡಿಯೂರಪ್ಪನವರು ಉತ್ತರ ಕೊಟ್ಟರು.

ಯಾವುದಾದರೂ ಕೂಡ ಒಂದು ಬಜೆಟ್ ಅನ್ನು ಮಂಡನೆ ಮಾಡತಕ್ಕಂಥ ಕಾಲದಲ್ಲಿ ಈ ರಾಜ್ಯದ ಸಮಗ್ರ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡತಕ್ಕಂಥಾದ್ದು ಸಮ್ಮಿಶ್ರ ಸರ್ಕಾರದ ಕೆಲಸ. ಈ ಒಂದು ಬಜೆಟ್ ಏನಿದೆ ಇದು ಒಂದೇ ಪಕ್ಷದ

ಬಜೆಟ್ ಆಗಿದೆ ಎನ್ನತಕ್ಕಂಥ ರೀತಿಯಲ್ಲಿ ಸಾರ್ವಜನಿಕರ ಮನಸ್ಸಿನಲ್ಲಿಯೂ ಕೂಡ ಆ ಭಾವನೆ ಇದೆ. ನಿನ್ನೆ ಕೂಡ ಯಡಿಯೂರಪ್ಪನವರು ವಿಕಾಸ ಯಾತ್ರೆ ಪ್ರಾರಂಭ ಮಾಡಿದ್ದಾರೆ. ದಾವಣಗೆರೆಯಿಂದ ನಿನ್ನೆ ರಾಯಚೂರಿನವರೆಗೆ ವಿಕಾಸ ಯಾತ್ರೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಸದನ ನಡೆಯುತ್ತಿದೆ, ಇವತ್ತು ನಾವು ಬಜೆಟ್ ಬಗ್ಗೆ ಇನ್ನೂ ಕೂಡ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಅವರು ಕಾಂಗ್ರೆಸ್ಸಿನವರಿಗೆ ಏನೇನು ಮಾತುಗಳನ್ನು ಹೇಳಿದ್ದಾರೆ ಅದನ್ನು ಹೇಳುವುದಕ್ಕೆ ನಾನು ಇಚ್ಛಿಸುವುದಿಲ್ಲ, ಪತ್ರಿಕೆಗಳನ್ನು ತರಿಸಿ ನೋಡಿ.

ಈಗೇನಾಗಿದೆಯೆಂದರೆ ಸನ್ಮಾನ್ಯ ಅಧ್ಯಕ್ಷರೇ, ಎಲ್ಲಾ ಪತ್ರಿಕೆಗಳು regional ಪತ್ರಿಕೆಗಳಾಗಿವೆ. ಗುಲಬರ್ಗಾದಲ್ಲಿ ಏನಾಗುತ್ತದೆ ಅದು ಇಲ್ಲಿ ಗೊತ್ತಾಗುವುದಿಲ್ಲ, ಇಲ್ಲಿ ಆಗುವುದು ಅಲ್ಲಿ ಗೊತ್ತಾಗುವುದಿಲ್ಲ. ನಿನ್ನೆ ಗಂಗಾವತಿಯ ಒಂದು ಸ್ಥಳದಲ್ಲಿ ಎಷ್ಟು ಕೆಟ್ಟ ಶಬ್ಧಗಳನ್ನು ಉಪಯೋಗಿಸಿದ್ದಾರೆ, ಅದು ಎಲ್ಲಿಯ ವೀರಾವೇಶ ಯಡಿಯೂರಪ್ಪನವರಿಗೆ ಬಂದಿದೆ ಎನ್ನುವುದು ಗೊತ್ತಿಲ್ಲ, ಅವರಿಗೆ ರಾಜ್ಯದಲ್ಲಿ ಯಾವ ಒಂದು ಹೆಚ್ಚಿನ ಬೆಂಬಲ ಇದೆ ಗೊತ್ತಿಲ್ಲ. ತಾತ್ಕಾಲಿಕವಾಗಿ ಇವತ್ತು ಬಜೆಟ್ ಅನ್ನು ಮಂಡನೆ ಮಾಡಿರುವುದರ ಬಗ್ಗೆ ತಮ್ಮ ಮೇಲೆ ಹೆಚ್ಚಿನ ಶ್ರೇಯಸ್ಸು ಅವರು ತೆಗೆದುಕೊಂಡಿದ್ದಾರೆ. ಇವತ್ತು ಬಜೆಟ್ ಸಾಮಾನ್ಯ ಜನರಿಂದ ತೆರಿಗೆ ವಸೂಲು ಮಾಡಿ ಕರ್ನಾಟಕ ಜನರ ನಿರೀಕ್ಷಣೆ ಮೇರೆಗೆ ಬಜೆಟ್ ಕೊಡಬೇಕು. ಆ ಬಜೆಟ್ ಕೊಡತಕ್ಕಂಥ ಕಾಲದಲ್ಲಿ ವಿಶೇಷವಾಗಿ ಹಿಂದುಳಿದ ಪ್ರದೇಶಕ್ಕಾಗಲಿ.. ಇವತ್ತು ಕಬ್ಬು ಬೆಳೆಗಾರರು ಸಾಕಷ್ಟು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ, ಮೊನ್ನೆ ಕೂಡ ನನ್ನ ಜೇವರ್ಗಿ ತಾಲ್ಲೂಕಿನಲ್ಲಿ ನನ್ನ ಪಕ್ಷಕ್ಕೆ ಸಂಬಂಧಪಟ್ಟವರಲ್ಲ, ಮಾನ್ಯ ಕುಮಾರಸ್ವಾಮಿಯವರ ಪಕ್ಷಕ್ಕೆ ಸೇರಿದವರೆಲ್ಲಾ ಕುಳಿತಿದ್ದರು, ಈ ಸರ್ಕಾರಕ್ಕೆ ಏನಾಗಿದೆ? ಯಡಿಯೂರಪ್ಪನವರಿಗೆ ಏನಾಗಿದೆ?

ಇವತ್ತು ಕಬ್ಬು that is the only commercial crop ಏನು ಬೆಳೆಯುತ್ತಿದ್ದಾರೆ, ಅದರ ಬಗ್ಗೆ ಏನೂ ಕೊಟ್ಟಿಲ್ಲ. ಇವತ್ತು ನೀರಾವರಿಗೆ ಕೊಡಲಿಲ್ಲ, ಇವೆಲ್ಲದರ ಬಗ್ಗೆ ಚರ್ಚೆಯಾಗಿದೆ. ನಾನು ಬಜೆಟ್ ಬಗ್ಗೆ ಚರ್ಚೆಯಾಗತಕ್ಕಂಥ ಕಾಲದಲ್ಲಿ ಇವತ್ತು ನಮಗೇನು ಈ ಸದನದಲ್ಲಿ ಹಕ್ಕುಚ್ಯುತಿ ಆಗಿದೆ ಎಂದು ಹೇಳಬೇಕಾಗಿದೆ. ಇವತ್ತು ಜವಾಬ್ದಾರಿಯುತವಾಗಿ ಕೆಲಸ ಮಾಡುವ ಬಗ್ಗೆ ತಮ್ಮ ತಲೆಯಲ್ಲಿ ಏತಕ್ಕೆ ಹೊಳೆಯುತ್ತಿಲ್ಲ ಎನ್ನುವುದು ನಮಗೆ ಗೊತ್ತಾಗುತ್ತಿಲ್ಲ. ಬಜೆಟ್ ವಿಷಯ ಹೇಳಿದರು. ಸರಾಸರಿಯಾಗಿ 203 ಕೋಟಿ ರೂಪಾಯಿಗಳು. ಘೋಷಣೆ

ಮಾಡಿದರು, ಇಲ್ಲಿ ಯಾರ ಹಣ ಯಾರಿಗೆ ಕೊಡುತ್ತಿದ್ದೀರಿ? ಈ ರಾಜ್ಯದ ಸಾಮಾನ್ಯ ಜನರ, ರೈತರ, ಬಡವರ ತೆರಿಗೆ ವಸೂಲು ಮಾಡಿ ಇವತ್ತು ನೀವು ಮನಸ್ಸಿಗೆ ಬಂದ ಹಾಗೆ ಹಂಚಿಕೆ ಮಾಡಲು ಆಗುವುದಿಲ್ಲ. ಹಾಗಾಗಿ ನಾವು ಹೇಳಬೇಕಾಗುತ್ತದೆ. ಅದು ನಮಗೆ ಒತ್ತಡವಾಗುವಂಥ ಭಾವನೆ ನಮ್ಮ ಮನಸ್ಸಿಗೆ ಬರುತ್ತದೆ. ನಿಮ್ಮ ಪಕ್ಷದ ಬಲವರ್ಧನೆಗೆ ಹಣವನ್ನು ಕೊಡತಕ್ಕಂಥದ್ದೂ ಅಲ್ಲ.

ಇವತ್ತು ಸಮ್ಮಿಶ್ರ ಸರ್ಕಾರದಲ್ಲಿ ಒಟ್ಟಾಗಿ ಕೆಲಸ ಮಾಡುವುದು ನಿಮಗೆ ಹಾಗೂ ಜೆ.ಡಿ.ಎಸ್.ನವರಿಗೆ ಬಿಟ್ಟಿದ್ದು, ನಾವೇನು ಅದರಲ್ಲಿ ಹಸ್ತಕ್ಷೇಪ ಮಾಡಲಿಕ್ಕೆ ಹೋಗುವುದಿಲ್ಲ. ಯಡಿಯೂರಪ್ಪನವರೇ ಹೇಳಿದರು ನನ್ನ ಬಜೆಟ್ ಬಗ್ಗೆ ಮನೆಮನೆಯಲ್ಲಿ ಚರ್ಚೆಯಾಗುತ್ತಿದೆ, ಬಡವರಲ್ಲಿ ಚರ್ಚೆಯಾಗುತ್ತಿದೆ ಎಂದು. ಗಂಗಾವತಿಯಲ್ಲಿ ಏನಾಗಿದೆಯೆಂದರೆ, ಅಲ್ಲಿನ ಜನ ಖಾಲಿ ಕೊಡಗಳನ್ನು ಇಟ್ಟುಕೊಂಡು ಸ್ವಾಗತ ಮಾಡಿದ್ದಾರೆ. ಕುಡಿಯುವ ನೀರಿಗೆ ತೊಂದರೆಯಿದೆ, ಕುಡಿಯುವ ನೀರಿಗೆ ನೀವು ದುಡ್ಡು ಕೊಟ್ಟಿದ್ದೀರಾ? ಬೆಂಗಳೂರು ನಗರದಲ್ಲಿ ಇವತ್ತು ಕುಡಿಯುವ ನೀರಿಗೆ ಎಷ್ಟು ಹಾಹಾಕಾರವಿದೆ? ಇವತ್ತು ಗುಲಬರ್ಗಾದಲ್ಲಿ ಪ್ರಪ್ರಥಮವಾಗಿ ನಿಮ್ಮ ಉಸ್ತುವಾರಿ ಸಚಿವರಾದ ದರ್ಶನಾಪೂರ್‌ರವರಿಗೆ ಕೇಳಿ, ಇವತ್ತು ಗುಲಬರ್ಗಾ ನಗರ ಮತ್ತು ಪಟ್ಟಣದಲ್ಲಿ ಎಷ್ಟು ತೊಂದರೆಯಾಗಿದೆ ಎನ್ನುವುದನ್ನು ಸಹ ಹೇಳುತ್ತಾರೆ. ಒಬ್ಬ ಹಣಕಾಸಿನ ಸಚಿವರಾಗಿ ಒಟ್ಟಾರೆ ರಾಜ್ಯಗಳ ಅಭಿವೃದ್ಧಿ ಬಗ್ಗೆ ಅವರು ಚಿಂತಿಸಬೇಕಾಗಿತ್ತು. ಇವತ್ತು ನಾವು ಮೊದಲೇ ಹೇಳಿದ್ದೇವೆ, ನೀವು ಕೊಟ್ಟಂಥ ಹೋದ ಸದದ ಬಜೆಟ್ಟಿನಲ್ಲಿ 63% ಪ್ರತಿಶತದಷ್ಟು ಖರ್ಚು ಮಾಡಿಲ್ಲವೆಂದು ನಾವು ಹೇಳಿದ್ದೇವೆ. ಆದರೆ ನೀವು 90% ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ನಾವು ಬರೆದ ಪತ್ರಕ್ಕೆ ಉತ್ತರ ಕೊಡಲಿಕ್ಕೆ ತಮಗೆ ಸೌಜನ್ಯತೆ ಇಲ್ಲ, ಯಾವಾಗಲೂ ಕೂಡ ತಾವು ಏನೆಲ್ಲ ಹೇಳಿದ್ದೀರಿ, ಅದಕ್ಕೆ ಪ್ರತಿಯೊಂದು ಹಂತದಲ್ಲಿಯೂ ನಾವು ಹೇಳಿದ್ದೇವೆ, ಅದರ ಬಗ್ಗೆ ನಾವು ಪ್ರಸ್ತಾಪ ಮಾಡತಕ್ಕಂಥಾದ್ದಿಲ್ಲ, ನಾನಾಗಲಿ, ಖರ್ಗೆಯವರಾಗಲಿ, ಸಿದ್ದರಾಮಯ್ಯನವರಾಗಲಿ ಎಲ್ಲರೂ ಕೂಡ ಹೆಚ್ಚಿನ ಬೆಳಕನ್ನು ಚೆಲ್ಲಿದ್ದಾರೆ.

ಇವತ್ತು ಬಂದಂಥ ಪ್ರಶ್ನೆ, ಏನು ಒಂದು ಸಂವಿಧಾನವಿದೆ, ನೀವು ಅದರ ಉಲ್ಲಂಘನೆ ಮಾಡಿದ್ದೀರಿ. ನಿಮಗೆ ಅದರ ಪ್ರಜ್ಞೆ ಇಲ್ಲ. ಕೆಳಮನೆಯಲ್ಲಿ ಏನೊಂದು 203.00 ಕೋಟಿ ರೂ.ಗಳನ್ನು ಕೊಟ್ಟು 52 ಹೊಸ ಕಾರ್ಯಕ್ರಮಗಳ ಬಗ್ಗೆ ಅನೌನ್ಸ್ ಮಾಡಿ, ಅಲ್ಲಿ ವಿಧಾನ ಪರಿಷತ್ತಿಗೆ ಹೋಗಿ ಮತ್ತೊಂದು 17.00 ಕೋಟಿ ರೂಪಾಯಿಗಳನ್ನು ತಾವು ಕೊಡುವುದಾಗಿ ಅನೌನ್ಸ್ ಮಾಡಿದ್ದೀರಿ. ಸಭಾಧ್ಯಕ್ಷರೇ,

ತಮ್ಮ ಗಮನಕ್ಕೆ ಬರಲಾರದೇ, ಸದನದಲ್ಲಿ ಚರ್ಚೆಯಾಗಲಾರದೇ ಕೆಳಮನೆಯ ಸದಸ್ಯರಿಗೂ ಕೂಡ ಗೊತ್ತಿಲ್ಲದೇ ವಿಧಾನಪರಿಷತ್ತಿನಲ್ಲಿ ಹೋಗಿ ಈ ರೀತಿ ಅನೌನ್ಸ್ ಮಾಡಿದ್ದಾರೆ. 1952ರಿಂದ ಈ ರೀತಿ ಯಾರೂ ಇವತ್ತಿನವರೆಗೂ ಕರ್ನಾಟಕ ರಾಜ್ಯದಲ್ಲಿ ಹಣಕಾಸಿನ ಸಚಿವರು ಉದ್ಧಟತನ ಮಾಡಿಲ್ಲ. ಮನಸ್ಸಿಗೆ ಬಂದಂತೆ ನಡೆದುಕೊಳ್ಳುವಂಥ ಕೆಲಸ ಮಾಡಿದ್ದಾರೆ, ಅದಕ್ಕೆ ಈ ಹಕ್ಕುಚ್ಯುತಿಯನ್ನು ತರುತ್ತಿದ್ದೇವೆ.

ನಮ್ಮ ಸದನಕ್ಕೆ ಎಲ್ಲಾ ಶಾಸಕರಿಗೆ ಇವತ್ತಿನ ದಿವಸ ನಮ್ಮಲ್ಲಿರತಕ್ಕಂಥ ಹಕ್ಕು ಇದು. ಚರ್ಚೆಗೆ ನಾವು ಎಷ್ಟು ಮಾನ್ಯತೆಯನ್ನು ಕೊಡುತ್ತೇವೆಂದರೆ ಇಲ್ಲಿ ಚರ್ಚೆಯಾದ ಮೇಲೆ ಆ ವಿಷಯ ಸದನಕ್ಕೂ ಕೂಡ ಹೋಗಬೇಕಾಗುತ್ತದೆ. ಇವತ್ತು ಈ ರೀತಿಯಾಗಿ ಮಾಡಿದ್ದನ್ನು ನೀವು ಹೊರಗಡೆ ಹೇಳಿದ್ದೀರಿ, ಕಾಂಗ್ರೆಸ್ ಪಕ್ಷ ಈಗ ಹೋಗಿಬಿಡುತ್ತದೆ. ಅಲ್ಲದೆ ಕಾಂಗ್ರೆಸ್ ಪಕ್ಷದವರು ಬಂದರೆ ನೀವು ಅವರಿಗೆ ಹೊಡೆಯಿರಿ ಎಂದು ಯಾವುದರಲ್ಲಿ ಹೊಡೆಯಿರಿ ಎಂದು ಹೇಳಿದ್ದಾರೆಂದು ಗೊತ್ತಿಲ್ಲ. ಅದು ತಮಗೆ ತಿರುಗಿಬೀಳುತ್ತದೆ. ಇನ್ನೂ ನಿಮಗೆ ಗೊತ್ತಿಲ್ಲ, ಇವತ್ತು ರಾಜ್ಯದಲ್ಲಿ ನೀವೇನಾದರೂ ಕೂಡ ಬೇರೆ ಕಡೆಗೆ ಹೋಗಿ ಆವೇಶದಿಂದ ಮಾತನಾಡಿದರೆ ಆಗುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಜನಾಭಿಪ್ರಾಯ ತಮ್ಮ ಪರವಿದೆ ಎಂದರೆ ಅದು ಸುಳ್ಳು. ಅವರು ಎಷ್ಟು ಸಲ ನಿಂತಿದ್ದಾರೆ, ಎಷ್ಟು ಸಲ ಬಿದ್ದಿದ್ದಾರೆಂಬುದು ಅವರಿಗೆ ಗೊತ್ತು. 1989ರಲ್ಲಿ ಕೂಡ ಸರಿಯಾದ ರೀತಿಯಲ್ಲಿ ಸೂಟ್ ಹೊಲಿಸಿ ಕುಳಿತಿದ್ದೀರಿ ಅಲ್ಲಿ ಬಿದ್ದುಬಿಟ್ಟಿರಿ; ನೀವು ಬಿದ್ದಿರಿ, ಈಶ್ವರಪ್ಪನವರೂ ಬಿದ್ದರು;

ಇವತ್ತು ನಾವು ಏತಕ್ಕೆ ಹೇಳುತ್ತಿದ್ದೇವೆ ಎಂದರೆ ಅಧ್ಯಕ್ಷರೇ, ಯಾವ ಮಾತುಗಳು ಈ ಸದನದಲ್ಲಿ ಪ್ರಸ್ತಾಪವಾಗಿಲ್ಲ, ಆ ಮಾತುಗಳನ್ನು ಆ ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ ಮತ್ತು ಯಾವುದೇ Rules of Procedure, business transations ಏನಿದೆ, Government of Karnataka ನಿಯಮಾವಳಿ ಏನಿದೆ, ನಮ್ಮ ಸಾಹೇಬರು ಇಲ್ಲ, ಅವರು ಬಂದಿದ್ದರೆ ನಿಯಮಾವಳಿ ಬಗ್ಗೆ ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ಇದೆಲ್ಲಾ ಅನೌನ್ಸ್ ಮಾಡಲಿಕ್ಕೆ have you taken the permission from Cabinet? ಸಂಪುಟದಲ್ಲಿ ಚರ್ಚೆಯಾಗಿದೆಯೇ? ಸಂಪುಟದಲ್ಲಿ ಚರ್ಚೆಯಾಗದಂಥ ವಿಷಯಗಳನ್ನು ಪ್ರಸ್ತಾಪ ಮಾಡುವಂಥ ರೀತಿಯಲ್ಲಿ ಇವತ್ತು ಇಂತಹ ಅವಕಾಶವಾದಿ ರಾಜಕಾರಣ ಬಹಳ ದಿವಸ ನಡೆಯುವುದಿಲ್ಲ. ನೀವು ಅವರೂ ಕೂಡಿಯೇ ಹೋಗಬೇಕಾಗುತ್ತದೆ; ಎಲ್ಲಿಯಾದರೂ ಕೂಡ ಪೆಟ್ಟಾಗಬಹುದು ಎನ್ನತಕ್ಕಂಥ ರೀತಿಯಲ್ಲಿ ತಾವು ಬಹಳ ಶಾಂತಿಯುತವಾಗಿ ಕುಳಿತು

ಮುಗುಳ್ನಗೆ ನಕ್ಕರೆ ಆಗುವುದಿಲ್ಲ. You are the Chief Minister of the State. You have to intervene. ನೀವು ನಿಮ್ಮ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗದೇ 52 ಸ್ಕೀಮ್ಸ್‌ಗೆ 203.00 ಕೋಟಿ ರೂಪಾಯಿಗಳನ್ನು ಇಲ್ಲಿ ಅನೌನ್ಸ್ ಮಾಡುತ್ತೀರಿ, ಮತ್ತೆ ಆ ಮನೆಗೆ ಹೋಗಿ. 17.00 ಕೋಟಿ ರೂಪಾಯಿಗಳ ಬಗ್ಗೆ ಅನೌನ್ಸ್ ಮಾಡುತ್ತೀರಿ. ಅದಕ್ಕೆ ನಾವೇನು ಹೇಳುತ್ತೇವೆ, ಸದನಕ್ಕೆ ಇವತ್ತು ಹಕ್ಕುಚ್ಯುತಿ ಆಗಿದೆ, ಇವತ್ತು ಬಹಳಷ್ಟು ಸಮಸ್ಯೆಗಳು ಇವೆ, ಆ ಸಮಸ್ಯೆಗಳಿಗೆ ಹೆಚ್ಚಿನ ದುಡ್ಡು ಕೊಟ್ಟರೆ ಸಾಕು.

11-30 ಗಂಟೆ

ಸ್ವಾಮೀಜಿಯವರ ಬಗ್ಗೆ ನಾವು ಹೇಳಲು ಇಚ್ಛೆಪಡುತ್ತಿಲ್ಲ. ಇವತ್ತು ಎಲ್ಲಾ ಕಡೆಗೆ ಬೇರೆ ಬೇರೆ ಕಡೆಗಳಿಗೆ, ಮಠಾಧೀಶರಿಗೆ ಕೊಟ್ಟಿದ್ದಾರೆ. ಅದನ್ನೂ ಒಂದೇ ಕಡೆ ಕೊಟ್ಟಿದ್ದಾರೆ. ಬೇರೆ ವರ್ಗದ ಜನರ ವಿಶ್ವಾಸ ಮೂಡಿಸುವಲ್ಲಿ ತಾವು ಕೊಟ್ಟಿಲ್ಲ. ಆ ರೀತಿ ಕೊಡತಕ್ಕ ಹಕ್ಕು ಸಹ ತಮಗಿಲ್ಲ. That is the property of this house. ಈ ಹೌಸ್ ತಮಗೆ ಮನ್ನಣೆ ಕೊಡಬೇಕಾಗಿದೆ. ತಾವು ದಾವಣಗೆರೆ ಮತ್ತು ಬೇರೆ ಕಡೆ ಹೋದಾಗ ಈ ಜನರು ಹಕ್ಕುಚ್ಯುತಿ ನಿರ್ಣಯ ತಂದಿದ್ದಾರೆಂದು ಹೇಳುತ್ತೀರಿ. ಮಾನ್ಯ ಅಧ್ಯಕ್ಷರೆ, ಹಕ್ಕುಚ್ಯುತಿ ನಿರ್ಣಯದ ಬಗ್ಗೆ ತಮ್ಮ ಅಧ್ಯಕ್ಷತೆಯಲ್ಲಿ ಸದನದಲ್ಲಿ ಚರ್ಚೆ ಮಾಡಬೇಕಾಗಿತ್ತು.

ಇವತ್ತು ಸದನ ನಡೆಯತಕ್ಕ ಕಾಲದಲ್ಲಿ ಪಕ್ಷದ ಬಲವರ್ಧನೆಗೆ ವಿಕಾಸಯಾತ್ರೆಗೆ ಹೋಗುತ್ತಿದ್ದಾರೆ. ಆ ರೀತಿ ಹೋಗತಕ್ಕದ್ದಲ್ಲ. ಆದರೂ Business Advisory Committee ನಲ್ಲಿ ಮಾತನಾಡಿ 11ನೇ ತಾರೀಖು ಇರುತ್ತೇನೆಂದು ಹೇಳಿದಿರಿ. ಆದ್ದರಿಂದ, ಇವತ್ತು ತಾವು ನಮ್ಮ ರಕ್ಷಣೆಗೆ ಬರಬೇಕು. ಈ ಸದನದಲ್ಲಿ ಚರ್ಚೆಯಾಗದಿರುವ ವಿಷಯಗಳನ್ನು ಹೊರಗಡೆ ಪ್ರಸ್ತಾಪ ಮಾಡಿ, ಉದ್ಧಟತನದ ಬಜೆಟ್ಟನ್ನು ಮಂಡನೆ ಮಾಡಿ ಅದನ್ನು ಸಮರ್ಥನೆ ಮಾಡಿಕೊಳ್ಳಲು ಸರ್ಕಾರವೇನು ಹೊರಟಿದೆ, ಅದಕ್ಕೆ ನಾವು ಛೀಮಾರಿ ಹಾಕಬೇಕಾಗಿದೆ. ಇವತ್ತು ಸದನದ ಹಕ್ಕುಚ್ಯುತಿಯಾಗಿದೆ. ನಮ್ಮೆಲ್ಲರ ಹಕ್ಕನ್ನು ತಾವು ಕಿತ್ತುಹಾಕಿದ್ದೀರಿ. ಇಲ್ಲಿ ಯಾವುದೇ ವಿಚಾರವನ್ನು ಪ್ರಸ್ತಾಪ ಮಾಡದೇ ಆ ಮನೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ. ಬಜೆಟ್ ಯಾವ ರೀತಿಯಾಗಿ ಆಯಿತು? ಮೇಲ್ಮನೆಯಲ್ಲಿ Finance Bill defeat ಆದ ಮೇಲೆ ಇಲ್ಲಿಗೆ ತಂದರು. ಆ ರೀತಿ ಬಂದ ಮೇಲೆ ಶಂಕರಮೂರ್ತಿಯವರು ವಿಧಾನ ಪರಿಷತ್ತಿನಲ್ಲಿ ಎಂದೂ ಕೂಡ Finance Bill defeat ಆಗಿರಲಿಲ್ಲ, ಇದೇ

ಮೊಟ್ಟ ಮೊದಲನೆಯ ಬಾರಿ ಆಗಿದೆಯೆಂದು ಹೇಳಿದರು. ನಾವೆಲ್ಲರು well ನಲ್ಲಿರುವಾಗ ತರಾತುರಿಯಾಗಿ ಪಾಸ್ ಮಾಡಿಕೊಂಡು ಹೋಗಿದ್ದಾರೆಂದು ನಾವೂ ಹೇಳಿದೆವು. ತರಾತುರಿಯಲ್ಲಿ ಬಿಲ್ಲುಗಳು ಪಾಸ್ ಆಯಿತು. ಹಣ ಬಿಡುಗಡೆಯಾಗಿಲ್ಲ. ಕುಡಿಯುವ ನೀರಿನ ಬಗ್ಗೆ, ಕಬ್ಬಿನ ಬೆಳೆಗಾರರ ಬಗ್ಗೆ, ಬೇರೆ ಬೇರೆ ಕಾರ್ಯಕ್ರಮಗಳ ಬಗ್ಗೆ ವಿಶೇಷವಾಗಿ ಬಡತನ ರೇಖೆಗೆ ಒಳಗಾಗಿರುವ ಜನರ ಬಗ್ಗೆ ಪ್ರಸ್ತಾಪ ಇಲ್ಲ. ನಿನ್ನೆ ಜಗದೀಶ್ ಶೆಟ್ಟರ್‌ರವರ ಬಿಲ್ ಇತ್ತು; ತರಾತುರಿಯಲ್ಲಿ Assembly adjourn ಆಯಿತು. ಇಲ್ಲಿ ಹಕ್ಕುಚ್ಯುತಿಯಾಗಿದೆ. ಅದರ ಬಗ್ಗೆ ಸರಿಯಾದ ಉತ್ತರ ಕೊಡಬೇಕು. ಹಿರಿಯ ಸದಸ್ಯರೆಲ್ಲರೂ ಇದರ ಬಗ್ಗೆ ಮಾತನಾಡುತ್ತಿದ್ದಾರೆ. ಯಾವುದೇ ಕಾಲದಲ್ಲಿ ಆಗದಿರುವ ಭ್ರಮೆ, ಇಂಥ ನಡವಳಿಕೆ ತಮ್ಮ ಅಧ್ಯಕ್ಷತೆಯಲ್ಲಿ ಈ ಸದನದಲ್ಲಿ ನಡೆದಿದೆ. ಇದಕ್ಕೆ ಹಕ್ಕುಚ್ಯುತಿಯಾಗಿದೆ. ಇದರ ಬಗ್ಗೆ ಚರ್ಚೆಯಾಗಬೇಕು. ಸಮರ್ಪಕವಾದ ಉತ್ತರ ಕೊಡಬೇಕು. ಉತ್ತರ ಕೊಟ್ಟ ಮೇಲೆ ಮುಂದೇನು ಮಾಡಬೇಕು ಎಂಬ ಬಗ್ಗೆ ನಾವು ಯೋಚನೆ ಮಾಡುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗುರುಮಿಟ್ಕಲ್) :- ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿರೋಧ ಪಕ್ಷದ ನಾಯಕರು ಹಕ್ಕುಚ್ಯುತಿ ನಿರ್ಣಯದ ಬಗ್ಗೆ, ಈ ಸದನಕ್ಕೆ ಅರ್ಥ ಸಚಿವರೇನು ಕಡೆಗಾಣಿಸಿದ್ದಾರೆ ಅದರ ಬಗ್ಗೆ ಅವರು ಸಾಕಷ್ಟು ವಿವರಣೆಯನ್ನು ಕೊಟ್ಟಿದ್ದಾರೆ. ಯಡಿಯೂರಪ್ಪನವರು ಈ ಸದನಕ್ಕೆ ಏನು 'House is taken for granted' ಎಂದು ಪರಿಗಣಿಸಿದ್ದಾರೋ? ನಾವೇನು ಹೇಳುತ್ತೇವೆ, ಅದನ್ನೆಲ್ಲ ಕೇಳಿಕೊಂಡು ಹೋಗುತ್ತಾರೆ, ಅದಕ್ಕೆ ರೂಲ್ಸ್, ರೆಗ್ಯುಲೇಷನ್ಸ್ ಏನೂ ಬೇಡ, ಸಂವಿಧಾನ ಬೇಡ, ನಾನು ಹೇಗೆ ಹೇಳುತ್ತೇನೋ, ಹಾಗೆ ನಡೆದುಕೊಂಡು ಹೋಗುತ್ತದೆ. ಅದೇ ರೀತಿಯಾಗಿ ಒಪ್ಪಿಗೆ ಕೊಡುತ್ತಾರೆ ಎನ್ನತಕ್ಕ ದೃಷ್ಟಿಯಿಂದ ಬಹುಶಃ ಅವರಿಗೆ ಖುಷಿ ಬಂದಂತೆ announce ಮಾಡುವುದು, ಖುಷಿ ಬಂದಾಗ promise ಮಾಡುವುದು, ಖುಷಿ ಬಂದಾಗ ಹೊರಗಡೆ ಹೇಳುವುದು, ಈ ರೀತಿಯಾಗಿ ನಡೆದುಕೊಂಡು ಬಂದಿದ್ದಾರೆ. ಬಹುಶಃ ಮೊದಲನೆಯ ಸಲ ಅಧಿಕಾರ ಸಿಕ್ಕಿದೆಯೆಂದೋ, ಶಹಬಾಷ್‌ಗಿರಿ ತೆಗೆದುಕೊಳ್ಳಬೇಕು ಎಂದು ದೃಷ್ಟಿಯಿಂದಲೋ, ಬೇರೆಯವರನ್ನು ಖುಷಿ ಪಡಿಸಬೇಕು ಎಂಬ ದೃಷ್ಟಿಯಿಂದಲೋ, ಜೆ.ಡಿ.(ಎಸ್) ಮತ್ತು ಬಿ.ಜೆ.ಪಿ. ಮಧ್ಯೆ ಇರುವ ಕಾಂಪಿಟೇಷನ್‌ನಲ್ಲಿ ಇದನ್ನು ಮಾಡಿದ್ದಾರೆಯೇ ಎಂದು ನನಗನ್ನಿಸುತ್ತದೆ. ಆರ್ಟಿಕಲ್ 198 ಏನು ಹೇಳುತ್ತದೆಂದರೆ, Article

198 of the Constitution prescribes the procedure in respect of Money Bill. ಅನಂತರ ಆರ್ಟಿಕಲ್ 199 defines Money Bill ಯಾವ ರೀತಿಯಾಗಿ present ಮಾಡಬೇಕು, Article 200, it prescribes the mode of assent to the said Bill. ಆ ಬಿಲ್‌ಗೆ ಯಾವ ರೀತಿಯಾಗಿ ಒಪ್ಪಿಗೆ ಪಡೆದುಕೊಳ್ಳಬೇಕು, ಯಾವ ರೀತಿಯಾಗಿ ಮಂಡಿಸಬೇಕು, ಯಾವಾಗ ಮಂಡಿಸಬೇಕು ಎಂಬುದು ಅದರಲ್ಲಿ ಸವಿಸ್ತಾರವಾಗಿದೆ. Article 202 lays down the laying before the House of Legislature of the State, a statement estimated receipts and expenditure of the State for that year. Sub clause 2 (a) to (f) define the ingredients of the Financial Statement. ಆ Financial statement ನಲ್ಲಿ ಎಷ್ಟು ಖರ್ಚು ಮಾಡಿದ್ದಾರೆ, ಎಷ್ಟು ಹಣ ಬಂದಿದೆ, ಏನು ಖರ್ಚು ಮಾಡುತ್ತೇವೆ ಎಂಬುದನ್ನು ಹೇಳಬೇಕೆಂದು ಇದೆ. ಆದರೆ, ಇವರು receipt ಅನ್ನು ನೋಡದೆ ಮೊದಲು ತಮ್ಮ original budget receipt ನ್ನು ಹೇಳಿ ಇಷ್ಟೊಂದು revenue ನಮಗೆ ಬರುತ್ತದೆಂದು ಹೇಳಿ ಇಷ್ಟು ಖರ್ಚು ಮಾಡುತ್ತೇನೆಂದು ಹೇಳಿ ಪ್ರಮುಖವಾದ ಬಜೆಟ್‌ನ್ನು ಇಲ್ಲಿ ಮಂಡಿಸಿ ಅನಂತರ ಒಂದು ಚೀಟಿ ಮೇಲೆ ಸುಮಾರು 57 itemsನ್ನು ಬರೆದುಕೊಂಡು ಬಂದು ಇಲ್ಲಿ ಓದಿದರು. ಅಂದರೆ, ಆರ್ಟಿಕಲ್ 202 of the Constitution ಪ್ರಕಾರ ಇವರು ಮಂಡಿಸಿದಂಥ Bill ಸರಿಯಾಗಿದೆಯೇ? ಕಾನೂನಿನ ಪ್ರಕಾರ ಅದಕ್ಕೆ ಅನುಮತಿ ತೆಗೆದುಕೊಂಡಿದ್ದಾರೆಯೇ? ಈ ಹೌಸ್‌ನಲ್ಲಿ ನಾವು ನಡೆಸಿಕೊಂಡು ಹೋಗುತ್ತಿರುವ procedure ನಂತೆ ಅವರು ನಡೆದುಕೊಂಡಿದ್ದಾರೆಯೇ?

ಇದು ಬಹಳ ಮುಖ್ಯ. ಅದು ಬಿಟ್ಟು ಯಾರು ಹೇಗೆ ಬೇಕೋ ಹಾಗೆ ಮಾಡಿಕೊಂಡು ಹೋಗುವುದಾದರೆ ಈ Rules of procedure, Constitution ಬೇಕಾಗಿಲ್ಲ, Finance Bill ಇಡತಕ್ಕ, ಬಜೆಟ್‌ನ್ನು ಮಂಡಿಸುವ ಅವಶ್ಯಕತೆ ಇಲ್ಲ. ಖಜಾನೆಗೆ ಹಣ ಬರುತ್ತದೆ, ಖುಷಿ ಬಂದಂತೆ ಅವರು ರಿಲೀಸ್ ಮಾಡಿಕೊಂಡು ಹೋದರೆ ಸಾಕು. ಅದಕ್ಕೆ ಯಾವ ರೂಲ್ಸ್, ಪ್ರೊಸೀಜರ್, ಸ್ಟೇಟ್‌ಮೆಂಟ್, income and expenditure ನ್ನು ತೋರಿಸುವುದು ಬೇಡ. ಹಿಂದಿನ ಕಾಲದಲ್ಲಿ ಮಹಾರಾಜರು ಯಾವ ರೀತಿಯಾಗಿ ಕೊಡುತ್ತಿದ್ದರು ಎಂಬುದನ್ನು ಸಿನಿಮಾದಲ್ಲಾದರೂ ನೋಡಿರಬಹುದು. ಅನೇಕ ಸಲ ಮಹಾರಾಜರ ಎದುರು

danceಗಳು ನಡೆಯುತ್ತದೆ. ಆ ರೀತಿ ನಡೆದಾಗ ಮಹಾರಾಜನಿಗೆ ಖುಷಿ ಬಂದಾಗ ತನ್ನ ಕೊರಳಿನಲ್ಲಿದ್ದ ಹಾರವನ್ನು ಅವರಿಗೆ ಬಿಸಾಕಿ ಬಿಡುವುದು, ಜೇಬಿನಲ್ಲಿದ್ದ ದುಡ್ಡನ್ನು ಬಿಸಾಕಿ ಬಿಡುವುದು. ಕೊನೆಗೆ, ಏನೂ ಇಲ್ಲ ಎಂದರೆ, ಏನಿದೆಯೋ ಅದನ್ನು ಕೊಟ್ಟು ಮಹಾರಾಜರು ತೃಪ್ತಿ ಪಡಿಸುವುದು. ಆ ರೀತಿಯಾಗಿ ಇವರು ಬಜೆಟ್‌ನ್ನು ಮಂಡಿಸಿದರೆ ಇದನ್ನು development ದೃಷ್ಟಿಯಿಂದ ಮಂಡಿಸಿದ ಬಜೆಟ್ ಎಂದು ತಿಳಿಯಬೇಕೆ?

ಅದರ ಜೊತೆಗೆ ಇವರು ವಿಕಾಸ ಯಾತ್ರೆಗೆ ಹೊರಟಿದ್ದಾರೆ. ಹೀಗಾದರೆ ಎಲ್ಲಿ ವಿಕಾಸವಾಗುತ್ತದೆ? ಲಗ್ನವಾದ ಮೇಲೆ ಶಿಶು ಹುಟ್ಟಬೇಕಾದರೆ 9 ತಿಂಗಳು ಬೇಕು. ಇವರು ಬಜೆಟ್ ಮಂಡಿಸಿ ಒಂದು ವರ್ಷವಾಯಿತು. ಇನ್ನು ವಿಕಾಸವನ್ನು ಎಲ್ಲಿ ಹುಡುಕಬೇಕು? ಇವರು ಗೋರಿಯ ಮೇಲೆ ಹಾಕಿರುವ ಕಲ್ಲನ್ನು ಹುಡುಕಬೇಕೇ ಹೊರತು ವಿಕಾಸವೆಲ್ಲಿದೆ? ಇದೇ ಇವರ ವಿಕಾಸ! ಅದಕ್ಕೊಂದು ಕೋಟಿ, ಇದಕ್ಕೊಂದು ಕೋಟಿ, ಅವರು ಹುಟ್ಟಿದ್ದಕ್ಕೆ ಒಂದು ಕೋಟಿ, ಇವರು ಸತ್ತಿದ್ದಕ್ಕೆ ಒಂದು ಕೋಟಿ ಕೊಡುವುದು ಇದೇನಿದು? ಹುಚ್ಚನ ಮದುವೆಯಲ್ಲಿ ಉಂಡವನೇ ಜಾಣ ಎಂಬಂತಾಗಿದೆ. ಯಾರ ಕೈಗೆ ಏನು ಸಿಗುತ್ತದೋ ಅದನ್ನು ತೆಗೆದುಕೊಳ್ಳುವುದು ಮತ್ತೆ ನಾವು ಅದನ್ನು ಮಾಡಿದ್ದೇವೆ ಇದನ್ನು ಮಾಡಿದ್ದೇವೆಂದು ಹೇಳುವುದು. ನಾವು ಕಾಂಗ್ರೆಸ್‌ನವರು ಲೂಟಿ ಮಾಡಿದ್ದಾರೆ, ಅವರ ಮನೆಗಳನ್ನು search ಮಾಡಬೇಕು ಎಂದು ಹೇಳುವುದು. 5,120 ಕೋಟಿ ರೂಪಾಯಿ ಜಮಾ ಮಾಡಿದ್ದೇವೆ ಎಂದಿದ್ದಾರೆ. ಏನು ನಿಮ್ಮ ಮನೆಯಿಂದ ತೆಗೆದುಕೊಂಡು ಬಂದಿರಾ? ಯಾರು ಲೂಟಿ ಮಾಡಿದ್ದಾರೆ? search ಮಾಡಿ ನೋಡೋಣ? Search ಆಗಲಿ. ಈ ರೀತಿಯಾಗಿ blackmail ಮಾಡಿ ಹೊರಗಡೆ ಹೆದರಿಸತಕ್ಕದ್ದು ಸರಿಯಲ್ಲ.

ಒಬ್ಬ Finance Minister ಆಗಿ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ದುಡ್ಡು ಎಲ್ಲಿ ಹೋಯಿತು? ಇವರ ಮನೆಯಲ್ಲಿ ಹುಡುಕಿ ಎಂಬ ಅವರ statementನ್ನು ನೋಡಿದ್ದೀರಾ? ಒಬ್ಬ ಜವಾಬ್ದಾರಿ ಇರತಕ್ಕ ಉಪಮುಖ್ಯಮಂತ್ರಿಯವರು ಈ ರೀತಿಯಾಗಿ ಒಂದು ಪಕ್ಷದ ಮೇಲೆ ಹೇಳುತ್ತಾರೆ. ಅಂದರೆ, ಮಾನ್ಯ ಘೋರ್ಪಡೆಯವರ ಮನೆ, ಎಸ್.ಎಂ.ಕೃಷ್ಣರವರ ಮನೆ, ನಮ್ಮ ಮನೆಯ ಮೇಲೆಲ್ಲಾ search ಮಾಡಿಸಿ. ಅದೇ ರೀತಿ ನಿಮ್ಮದೆಲ್ಲಾ ನಡೆಯಲಿ. ಎಂದಿನಿಂದ ನೀವು ಶಾಸಕರಾಗಿದ್ದೀರಿ, ಎಂದಿನಿಂದ ನಾವು ಶಾಸಕರಾಗಿದ್ದೇವೆ, ಇವತ್ತು ಹೊರಕ್ಕೆ ಬರಲಿ. ಈ ರೀತಿ ಅವಮಾನ ಮಾಡತಕ್ಕದ್ದು, blackmail

ಮಾಡತಕ್ಕ ತಂತ್ರವನ್ನು ತಾವು ಬಿಟ್ಟು ಬಿಡಿ. ತಾವು ಸರ್ಕಾರವನ್ನು ಸರಿಯಾಗಿ ನಡೆಸಬೇಕು, ಸರಿಯಾಗಿ development ಆಗಬೇಕು ಎಂಬ ಇಚ್ಛೆ ಇದ್ದರೆ, ಕಾನೂನಿನ ಪ್ರಕಾರ rule of law ಪ್ರಕಾರ ಸಂವಿಧಾನದ ಪ್ರಕಾರ ನಡೆಯಬೇಕು.

ನಾವು ನೋಡಿದ್ದೇವೆ. ನೀವೇನು ಮಾಡಿದ್ದೀರೆಂದು ಹೆದರಿಸುವುದು, ಹಿಂದೆ ಏನಾಗಿದೆ ನೋಡಿದ್ದೇವೆಂದು ಹೇಳುವುದು ಎಂದೆಲ್ಲಾ, ಇದನ್ನೇ ಹೇಳಲು ನೀವು ಬಂದಿದ್ದೀರಾ? ಅದನ್ನು ಹೇಳಲು ನೀವಿಬ್ಬರೂ ಸೇರಿದ್ದೀರಾ? ಅದನ್ನು ಹೇಳಲು ಜನರ ಮುಂದೆ ಹೋಗುತ್ತಿದ್ದೀರ? ನಮಗಿಂತ ಉತ್ತಮವಾದ ಕೆಲಸ ಮಾಡಿ ನಮಗಿಂತ ಹೆಚ್ಚಿನ ಅಭಿವೃದ್ಧಿ ಮಾಡಿ ನೀವು ತೋರಿಸಿದರೆ ಅದಕ್ಕೆ ಶಹಭಾಷ್‌ಗಿರಿ ಕೊಡುತ್ತೇವೆ. ನಮಗಿಂತ ಹೆಚ್ಚಿನ ಹಣ ನೀರಾವರಿಗೆ ಇಟ್ಟಿದ್ದರೆ ಹೆಚ್ಚಿನ ಹಣ ನೀವು ಪವರ್‌ಗೆ ಇಟ್ಟಿದ್ದರೆ ನಮಗಿಂತ ಹೆಚ್ಚಿನ ಹಣ ನೀವು ಕೃಷಿಗೆ ಇಟ್ಟಿದ್ದರೆ ನಮಗಿಂತ ಹೆಚ್ಚಿನ ಹಣ ನೀವು ಆಶ್ರಯ ಮನೆಗಿಟ್ಟಿದ್ದರೆ ನಾನು ಹೇಳುತ್ತಿದ್ದೆ. ನೀವು ಈಗ ಕೊಟ್ಟಿರುವ 57, ಹಿಂದೆ ಕೊಟ್ಟಿದ್ದ 63 ಭರವಸೆಗಳು ಏನು ಕೊಟ್ಟಿದ್ದೀರೆಂದು ತೆಗೆದು ನೋಡಿ. ಆಗ ನಿಮಗೆ ತಿಳಿಯುತ್ತದೆ ಎಷ್ಟರ ಮಟ್ಟಿಗೆ ಸಾಧನೆಯಾಗಿದೆ ಅಂತ. ಮೊನ್ನಿನ ಬಜೆಟ್ ನಲ್ಲಿ 273 ಭರವಸೆ ಕೊಟ್ಟಿದ್ದೀರಿ, ಅದರಲ್ಲಿ 56 ಪೂರಕ ಅಂದಾಜಿನಲ್ಲಿವೆ, ಆಮೇಲೆ 121 ಭರವಸೆಗಳಲ್ಲಿ 43 ಭರವಸೆ ರಿಪೀಟಾಗಿವೆ. ಹೋದ ಸದದ 121 ಭರವಸೆಗಳಲ್ಲಿ ಕೇವಲ 43 ಅಂತ ಯೋಜನಾ ಆಯೋಗದ ಸದಸ್ಯರೊಬ್ಬರು ಹೇಳಿದರೆ ಅವನ್ಯಾರ್‍ರೀ ಅಂದರು. ಅವರು ತಿರುಗೇಟು ಕೊಟ್ಟರು, ನಾನು ಪ್ರೂವ್ ಮಾಡದೇ ಹೋದರೆ ನೀವು ಕೊಡುವ ಶಿಕ್ಷೆ ತಗೊಳ್ಳುತ್ತೇನೆ ಅಂದರು ಜೈನರು. ಅಂಥವರಿಗೆ ಬಾಯಿಗೆ ಬಂದಂತೆ ಅನ್ನುವುದು. ನಮಗೆ ಹೇಗೆ ರಾಜಕೀಯ ವೇದಿಕೆಯಿಂದ ಮಾತನಾಡುತ್ತಾರಲ್ಲ ಅದೇ ರೀತಿ ಒಬ್ಬ economist ಗೆ ಈ ಸದನದಲ್ಲಿ ಏಕವಚನದಲ್ಲಿ ಮಾತನಾಡುವುದು.

ಹಾಗಾದರೆ ಇದು ಅಹಂಕಾರ ಅನ್ನುತ್ತೀರೋ ದುರಹಂಕಾರ ಅನ್ನುತ್ತೀರೋ. ಇವರಿಗೆ ಸಂಸ್ಕೃತಿ ಕಲಿಸಬೇಕಾಗಿಲ್ಲ ನಾನು. ಅವರು RSS cadre ನಿಂದ ಬಂದವರು. ಮುಂಜಾನೆಯಿಂದ ಸಂಜೆತನಕ ಸಂಸ್ಕೃತಿ ಧರ್ಮ ನ್ಯಾಯ ದೇವರು ದಿಂಡರು ಎಲ್ಲ ಅವರಲ್ಲೇ ಇವೆ. ಅಂಥವರ ಬಾಯಿಂದ ಇಂಥ ಮಾತು ಬರುತ್ತವೆ ಅಂದರೆ ಎಷ್ಟರಮಟ್ಟಿಗೆ RSS, BJP ಯವರ ಇವರಿಗೆ ಸಂಸ್ಕೃತಿ ಕಲಿಸಿದ್ದಾರೆಂದು ಗೊತ್ತಾಗುತ್ತದೆ. ಅದೇ ರೀತಿ ಇವರು ಹೊಸದಾಗಿ ಕೊಟ್ಟ ಪ್ರಾಮಿಸ್ 56 ಕೋಟಿ ಆಮೇಲೆ ಪುನಃ ಆ ಮನೆಯಲ್ಲಿ 17 ಕೋಟಿ, ಅದನ್ನು ಆ ಮನೆಯಲ್ಲಿ ಅಪ್ರೂವ್ ಮಾಡಿಸಿಕೊಂಡರು.

ಇಲ್ಲಂತೂ ತಮಗೆ ಗೊತ್ತಿದೆ, ಸದನ ದಿಢೀರನೆ ಅಜನ್ರ್ನಾಯಿತು. ಪುನಃ ಅದನ್ನು ಎತ್ತಲಾಗಲಿಲ್ಲ. ಅಂದರೆ ಇಲ್ಲಿ ಪ್ರಸ್ತಾಪ ಮಾಡಿ ರಿಜೆಕ್ಟಾಗಿ ಅಲ್ಲಿ ಮಂಡನೆ ಮಾಡಿ ಅಲ್ಲೂ ರಿಜೆಕ್ಟಾಗಿ ಇಲ್ಲಿ ಪುನಃ ಅದಕ್ಕೆ ಮನ್ನಣೆ ಪಡೆದಿದ್ದರೆ ಏನಾದರೂ ವ್ಯಾಲ್ಯೂ ಇರುತ್ತಿತ್ತು. ಆದರೆ ಇವರೇನು ಮಾಡಿದರು? ಅಲ್ಲಿ ಮಂಡಿಸಿದರು, ಇಲ್ಲಿ ತಂದರು, ಅದೂನೂ ಪಾಸ್. ಎಷ್ಟೊಂದು ಆತುರ, ತರಾತುರಿ. ಏನು ಬೇಕೋ ಅದು ಮಾಡಿಕೊಂಡು ಹೋಗೋಣ ಎಂಬ ನೀತಿಯಿಂದ ಹೊರಟರೆ ಯಾವುದೂ ಕಾನೂನು ಪ್ರಕಾರ ರಾಜ್ಯದೊಳಗೆ ನಡೆಯುವುದಿಲ್ಲ ಎಂಬುದಕ್ಕೆ ಇದೊಂದು ಸಾಕ್ಷಿ. ಕಾನೂನು ಪ್ರಕಾರ ನಡೆಯಬೇಕು ಎಂಬ ಇಚ್ಛೆ ಇದ್ದರೆ ತಾವು ರೂಲ್ಸ್ ಪ್ರಕಾರ ಹೋಗಿ. ಸಂವಿಧಾನ ಪ್ರಕಾರ ಹೋಗಿ. Financial code ಪ್ರಕಾರ ಹೋಗಿ. Business transaction rules ಪ್ರಕಾರ ಹೋಗಿ. ಕ್ಯಾಬಿನೆಟ್‌ಗೆ ಯಾವುದು ಒಯ್ಯಬೇಕು ಯಾವುದು ಬಿಡಬೇಕು ಅನ್ನುವದೂ ನಿಮಗೆ ಗೊತ್ತಿರಬೇಕು. ಅನೇಕ ಸಾರಿ ಹೇಳುವುದು; ಇಲ್ಲ ನನಗೆ ಅರ್ಥ ಸಚಿವನಾಗಿ ಎಲ್ಲ ಅಧಿಕಾರವೂ ಇದೆ ಅಂತ. ಸ್ವಾಮಿ, ಬಜೆಟ್‌ನಲ್ಲಿರುವುದಕ್ಕೆ ಈ ಸದನ ಏನು ಒಪ್ಪಿಗೆ ಕೊಟ್ಟಿರುತ್ತದೋ ಅದಕ್ಕೆ ಮಾತ್ರ ನಿಮಗೆ ಹಕ್ಕಿದೆ. ಅದಾದ ಮೇಲೆ ನಿಮ್ಮ ಸೆಕ್ರೆಟರಿಯೇಟ್ ರೂಲ್ಸ್ ಅಥವಾ ನಿಮ್ಮ ಕ್ಯಾಬಿನೆಟ್ ರೂಲ್ಸ್ ಪ್ರಕಾರ ಒಂದು ಮಿತಿಗಿಂತ ಮೀರಿದರೆ ಅದಕ್ಕೆ ಪುನಃ ಆ ಸಭೆಯ ಮುಂದೆ ತಂದು ಮನ್ನಣೆ ಪಡೆದು ಅದನ್ನು ಪ್ರಕಟಿಸಬೇಕೇ ಹೊರತು ಸಾಮಾನ್ಯವಾಗಿ ಒಂದು ಸ್ಕೂಲ್ ಕೆಲಸವೋ ರಸ್ತೆ ಕೆಲಸವೋ ಮಾಡಲು ಒಂದು ಕೋಟಿ ಬೇಕು ಅಂದರೆ ಕ್ಯಾಬಿನೆಟ್ ಮುಂದೆ ಅಪ್ರೂವಲ್ ಪಡೆಯಬೇಕಾಗಿಲ್ಲ. ಕೋಟ್ಯಂತರ ರೂ.ನೀವು ಮನಸಿಗೆ ಬಂದಂತೆ ಪ್ರಕಟಿಸುತ್ತೀರಿ ಅಂದರೆ ಅದು ನೀತಿಬಾಹಿರ, ಸಂವಿಧಾನಬಾಹಿರ, ಕಾನೂನುಬಾಹಿರ. ಆದ್ದರಿಂದ ಇದನ್ನು ಹೇಳಿಕೊಳ್ಳಲಿಕ್ಕೆ ಇವರಿಗೆ ನೈತಿಕ ಹಕ್ಕಿಲ್ಲ ಅಂತ ಹೇಳುತ್ತೇನೆ. ಮತ್ತೊಂದು ಹೇಳಿದ್ದಾರೆ. ನಾನು 5312 ಕೋಟಿ ಹೆಚ್ಚು ತೆರಿಗೆ ಸಂಗ್ರಹಿಸಿದ್ದೇನೆ ಅಂತ. ಅದರ ಜೊತೆಯಲ್ಲಿ ನಿಮ್ಮ ಪಿರಿಯಡ್ನಲ್ಲಿ 3200 ಕೋಟಿ ಕೇಂದ್ರ ಸರ್ಕಾರದಿಂದ ಬೇರೆ ಬೇರೆ ಆರ್ಥಿಕ ಸಂಸ್ಥೆಗಳಿಂದ ಬಂದಿದೆ as loans, grants and share from central taxes. For example: share from central taxes has raised from Rs.4608 Cr. to Rs.5009 Cr. in 2006-07, increase by Rs.400 Cr. Similarly, grants from central government has increased from Rs.4643 Cr. to Rs.4801 Cr. increase by about Rs.250 Cr. Some

time during 2006-07 loans received from World Bank, RBI, NCDC, NABARD and other financial institutions have been increased from Rs.1200 Cr. to Rs.3200 Cr. That means an estimated Rs.2000 Cr. is borrowed in this year. ಇದು ಯಾಕೆ ಹೇಳುತ್ತೇನೆ ಅಂದರೆ ನೀವು ತೆರಿಗೆ ವಿಧಿಸಲಿಲ್ಲ ಅಂದರೂ sales tax ಬಾಬು ಪ್ರತಿ ವರ್ಷ increase ಆಗುತ್ತದೆ. 5 ರಿಂದ 6% inflation ಹೆಚ್ಚಿರುತ್ತದೆ. ಇವತ್ತು ಸ್ಟೀಲ್, ಸಿಮೆಂಟ್ ಯಾವುದೇ ತೆಗೆದುಕೊಳ್ಳಿ, 20, 30, 40% double jump ಆಗಿದೆ. ಸಹಜವಾಗಿ ಸೇಲ್ಸ್ ಟ್ಯಾಕ್ಸ್ ಬರಲೇಬೇಕು. ಇದೆಲ್ಲ ಹಿಂದಿನ ಸರ್ಕಾರ ಹಾಕಿದ ಬುನಾದಿ, ಅದು ಪಾನೀಯ ನಿಗಮ ಇರಬಹುದು, ಅಥವಾ Vat system ಇರಬಹುದು ಇವೆಲ್ಲವೂ ಅದಕ್ಕೆ ಕಾಂಟ್ರಿಬ್ಯೂಟ್ ಮಾಡಿದೆ. ಇವರ brain child ಏನಲ್ಲ. ಆದರೆ ಏನೋ ಸ್ವಲ್ಪಮಟ್ಟಿಗೆ ನೀವು ಮಾಡಿದ್ರೆ ಹೇಳಿಕೊಳ್ಳಿ; ಅತಿಯಾಗಿ ನಾನೇ ಒಬ್ಬ ಹರಿಶ್ಚಂದ್ರನ ಮಗ, ಹಿಂದಿನವರು ಏನೂ ಮಾಡಿಲ್ಲ, ಇವರ ಬರೇ ಲೂಟಿ ಮಾಡುವುದಕ್ಕೆ ಹುಟ್ಟಿದ್ದಾರೆ ಎಂಬ ಅಭಿಪ್ರಾಯ ಸದನದ ಒಳಗಡೆ ಹೊರಗಡೆ ಕೊಡುವುದು ನಿಜವಾಗೂ ಯಾರಿಗೂ ಗೌರವ ತರುವಂಥದಲ್ಲ. ಕನಿಷ್ಟ ಇನ್ನು ಮೇಲಾದರೂ ಇಂಥ ಮಾತು ನಿಲ್ಲಿಸಿರಿ, ಟೀಕೆ ಮಾಡಿರಿ, ನಾವೂ ಟೀಕೆ ಮಾಡುತ್ತೇವೆ. ಅದು ರಚನಾತ್ಮಕವಾಗಿರಬೇಕು. ನೀವು ಎಲ್ಲಿಂದ ಯಾವ ಹಣ ತಂದಿರಿ ಅಂತ ನಾವು ಹೇಳುತ್ತೇವೆ, ನೀವು ಎಷ್ಟು ನೀರಾವರಿಗಾಗಿ ಖರ್ಚು ಮಾಡಿದ್ದೀರಿ ಅಂತ ಹೇಳಿಕೊಳ್ಳಿ. ಬಜೆಟ್‌ನಲ್ಲಿ ನೂರು ಕೋಟಿ ಇದ್ದರೆ ಕಾಂಗ್ರೆಸ್ ನವರು ಸಾವಿರ ಕೋಟಿ ಲೂಟಿ ಮಾಡಿದರು ಅನ್ನುವುದು. ಹೀಗೆ ಬಾಯಿಗೆ ಬಂದದ್ದನ್ನು ಹೇಳುವುದನ್ನು ದಯವಿಟ್ಟು ನಿಲ್ಲಿಸಬೇಕು.

ನಿಮ್ಮ ಕೈಗೆ ಸಿಕ್ಕಿದೆ, ನಿಮ್ಮ ಪಕ್ಷದ ಬೆಳವಣಿಗೆ ಮಾಡಿಕೊಳ್ಳಬೇಕು ಅಂತ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೀರಿ. ಅದಕ್ಕಾಗಿ ಗುಡಿಗುಂಡಾರಗಳಿಗೆಲ್ಲ ಕೊಡುತ್ತಿದ್ದೀರಿ. ಶಿರಾಳಕೊಪ್ಪಕ್ಕೆ ಕೊಟ್ಟುಕೊಂಡಿರಿ, ಶಿಕಾರಿಪುರಕ್ಕೆ ಕೊಟ್ಟುಕೊಂಡಿರಿ, ಇಲ್ಲಿಂದ ವಿಶ್ವವಿದ್ಯಾಲಯ ಒಯ್ದು ರಾಮನಗರಕ್ಕೆ ಹಾಕುತ್ತಿದ್ದೀರಿ. ಇವೆಲ್ಲ developmental expenditure? ಇವೆಲ್ಲ ಕೂಡ ಶಿರಾಳಕೊಪ್ಪಕ್ಕೆ ಕೊಟ್ಟಿದ್ದೀರಿ. ಶಿಕಾರಿಪುರಕ್ಕೆ ಕೊಟ್ಟಿದ್ದೀರಿ, ಇಲ್ಲಿರುವ ವಿಶ್ವವಿದ್ಯಾನಿಲಯವನ್ನು ಒಯ್ದು ರಾಮನಗರಕ್ಕೆ ಹಾಕುತ್ತಿದ್ದೀರಿ. ಇವೆಲ್ಲ ಕೂಡ developmental expenditure. ಅದರಿಂದ ಎಲ್ಲ growth rate ಜಾಸ್ತಿಯಾಗುತ್ತದೆ. ಇವೆಲ್ಲ ಶಿಕಾರಿಪುರಕ್ಕೆ, ಶಿರಾಳಕೊಪ್ಪಕ್ಕೆ

ರಾಮನಗರಕ್ಕೆ ಹೋಗುವುದರಿಂದ growth rate ಸ್ವಲ್ಪ ಹೆಚ್ಚಿಗೆ ಆಗುತ್ತದೆ. Per capita income ಈ ಜನರದು ಹೆಚ್ಚಿಗೆ ಆಗುತ್ತದೆ. ಈ ಕಡೆ ಹೆಚ್ಚು ಗಮನವನ್ನು ಅರ್ಥ ಸಚಿವರು ಕೊಟ್ಟಿದ್ದಾರೆ. ಅದರ ಜೊತೆಯಲ್ಲಿ 56 promise ಗಳನ್ನು ಮಾಡಿದ್ದಾರೆ, ಆ ಹಿಂದೆ ಏನು ಸುಮಾರು ನೂರಾರು promises ಗಳನ್ನು ಮಾಡಿದ್ದಾರೆ, ಅದೆಲ್ಲದರಲ್ಲೂ ಕೂಡ growth rate ಇದೆ. ನಾನು ಅದನ್ನು ಓದುವುದಕ್ಕೆ ಹೋದರೆ ಇನ್ನೊಂದು ಬಜೆಟ್ ಆಗುತ್ತದೆ. ಆದ್ದರಿಂದ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ.

ಅಂದರೆ ಖಂಡಿತವಾಗಿಯೂ ಸಂವಿಧಾನವನ್ನು ಉಲ್ಲಂಘನೆ ಮಾಡಿದ್ದಾರೆ. Rules of Procedure ಅನ್ನು deviate ಮಾಡಿದ್ದಾರೆ. Cabinet ಗಮನಕ್ಕೂ ತರದೆ ಅನೇಕ ವಿಚಾರಗಳನ್ನು ನೇರವಾಗಿ ಸದನದ ಹೊರಗಡೆ, ಸದನದ ಒಳಗಡೆ ಕೂಡ ತನ್ನದೇ ಆದಂಥ ರೀತಿಯಲ್ಲಿ ಪ್ರಸ್ತಾಪ ಮಾಡಿ ಇವತ್ತು ಮಾನ್ಯ ಮುಖ್ಯಮಂತ್ರಿಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲವೆನ್ನುವ ಮಾತು ನಮಗಂತೂ information ಇದೆ. ಮತ್ತು ಅವರು ಅದನ್ನು deny ಮಾಡಿದರೆ ಆ ಮಾತು ಬೇರೆ. ಆದರೆ ಅದು ಸತ್ಯ. ಇದು ನೂರಕ್ಕೆ ನೂರು ಸತ್ಯ. ಆದರೆ ನಿಮ್ಮ competition ನಲ್ಲಿ ನಾವೇ ಸೃಷ್ಟಿಸಿದ ಕಾನೂನುಗಳನ್ನು violate ಮಾಡುವುದಕ್ಕೆ ಹೋಗಬೇಡಿ. ಏಕೆಂದರೆ ಈ ಕಾನೂನುಗಳು permanent ಇರತಕ್ಕದ್ದು. ಯಾವುದೇ ಸರ್ಕಾರ ಬಂದು ನೀವು ಇಲ್ಲಿ Opposition ನಲ್ಲಿ ಕುಳಿತಾಗ ಇದೇ ರೂಲ್ಸ್, ಇದೇ procedure ಬಗ್ಗೆ challenge ಮಾಡತಕ್ಕಂಥವರು. ಅದಕ್ಕೆ ದಯವಿಟ್ಟು ಅಧ್ಯಕ್ಷರೇ ತಾವಾದರೂ ಮನಸ್ಸು ಗಟ್ಟಿ ಮಾಡುತ್ತಿಲ್ಲ. ಇಂಥವೆಲ್ಲ ಬಂದಾಗ ನಾನು ಒಪ್ಪುವುದಿಲ್ಲವೆಂದು ಹೇಳಬೇಕು. ಏಕೆ ತಂದಿರಿ ನೀವು ಎಂದು ಹೇಳಬೇಕು. ಏಕೊ ನೀವು ಹೇಳುತ್ತಿಲ್ಲ. ಸ್ವಲ್ಪ ಧೈರ್ಯ ಮಾಡಿ ನೋಡಿ ಹೇಗೆ ಆಗುತ್ತದೆಂದು. ಸರಿಹೋಗುತ್ತದೋ ಇಲ್ಲವೋ ಎಂದು ನೋಡಿ. ಇಷ್ಟು ಹೇಳಿ ನಾನು ಹೆಚ್ಚಿಗೆ ವಿಷಯವನ್ನು ಪ್ರಸ್ತಾಪ ಮಾಡದೇ ಇವೆಲ್ಲ ಕೂಡ ಕಾನೂನು ರೀತಿಯಿಂದ ಸರಿ ಇಲ್ಲ ಎನ್ನತಕ್ಕ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ) :- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಖರ್ಗೆಯವರು ಸದನದ ಹಕ್ಕುಚ್ಯುತಿಯಾಗಿದೆ, ಸದಸ್ಯರ ಹಕ್ಕುಚ್ಯುತಿಯಾಗಿದೆ ಎಂದು ಹೇಳಿ ಒಂದು privilege motion notice ಅನ್ನು ಕೊಟ್ಟಿದ್ದಾರೆ. ಈಗಾಗಲೇ ಅದರ ಬಗ್ಗೆ ಅನೇಕ ವಿಚಾರಗಳನ್ನು ಇಬ್ಬರು

ಮುಖಂಡರುಗಳು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಮಂತ್ರಿಯಾಗಿ ಬಹಳ ಹುರುಪಿನಿಂದ, ಬಹಳ ಇಡೀ ದೇಶಕ್ಕೆ ಮಾದರಿಯಾದಂಥ ಆಯವ್ಯಯವನ್ನು ಮಂಡಿಸಿದ್ದೇನೆಂದು ಹೇಳಿ ಅವರ ಪಾಡಿಗೆ ಅವರೇ ಬೆನ್ನು ತಟ್ಟಿಕೊಳ್ಳುತ್ತಿದ್ದಾರೆ. ಆದರೆ ಅವರು ಎಲ್ಲೂ ಕೂಡ ಅವರು ಮಂಡಿಸಿರುವ ಬಜೆಟ್‌ನ ಮೂಲಕ ಇದು ರಾಜ್ಯದ ಬೆಳವಣಿಗೆ ಹೇಗೆ ಆಗುತ್ತದೆ, ಆಂತರಿಕ ಉತ್ಪನ್ನ ಹೇಗೆ ಹೆಚ್ಚಾಗುತ್ತದೆ, ಆರ್ಥಿಕ ಶಿಸ್ತನ್ನು ನಾವು ಯಾವ ರೀತಿ ಮಾಡುತ್ತೇವೆ ಎಂಬುದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗಿಲ್ಲ.

Article 202 of the constitution, ನಮ್ಮ ದೇಶದ ಸಂವಿಧಾನದಲ್ಲಿ Presentation of Budget ಬಗ್ಗೆ ಪ್ರಸ್ತಾಪವನ್ನು ಮಾಡುತ್ತಾರೆ. ಕಲಂ 203, 204, 205ರಲ್ಲಿ ಹೇಳುತ್ತಾರೆ. ಕಲಂ 205ರಲ್ಲಿ supplementary estimates ಗಳನ್ನು ಮಾಡುವುದಕ್ಕೆ ಅವಕಾಶಗಳಿದ್ದಾವೆ. ಕಲಂ 203ರಲ್ಲಿ Procedure ಹೇಗೆ ಇರಬೇಕೆಂದು ಹೇಳುತ್ತಾರೆ. ಕಲಂ 204ರಲ್ಲಿ ಕೂಡ appropriation bill ಬಗ್ಗೆ ಪ್ರಸ್ತಾಪವಾಗುತ್ತದೆ. ಕಲಂ 204 appropriation bill, ಕಲಂ 203 procedure, ಕಲಂ 202 presentation of budget. ಮತ್ತೆ ಅದಕ್ಕೆ ingredients ಏನು ಎನ್ನುವುದು ಕೂಡ sub clause ನಲ್ಲಿ ಹೇಳಿದ್ದಾರೆ. ಮಾನ್ಯ ಯಡಿಯೂರಪ್ಪನವರು ಉತ್ತರ ಕೊಡುವಾಗ ಒಂದು ಘೋಷಣೆ ಮಾಡಿಬಿಟ್ಟರು. 52 programme amounting to Rs.203 crores. ಇಲ್ಲಿ ಒಂದು annouce ಮಾಡಿದರು. ಮತ್ತೆ Upper House ನಲ್ಲಿ ಅಲ್ಲಿ ಹೋಗಿ 17 ಕೋಟಿ ಆಗುವಷ್ಟು announce ಮಾಡಿಬಿಟ್ಟರು. ಇದು ಈಗ annouce ಮಾಡಿದರಲ್ಲ, ಇವು ಬಜೆಟ್‌ನಲ್ಲಿ ಇರಬೇಕಾಗಿತ್ತು.

ಇವು ಬಜೆಟ್ ಮಂಡಿಸುವಾಗಲೇ ಇರಬೇಕಾಗಿತ್ತು. ಇವರು announce ಮಾಡಿದ್ದರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಿದ್ದೇವೆ? ಮತ್ತು ಇಲ್ಲಿ ಬಜೆಟ್‌ನ್ನು ಮಂಡಿಸುವುದು ಏಕೆ? Financial Statements of estimated expenditure and estimated receipts ಅದನ್ನು ಇಲ್ಲಿ ಚರ್ಚೆ ಮಾಡಿ ಸದನದ ಒಪ್ಪಿಗೆಯನ್ನು ಪಡೆಯಬೇಕು. That is the procedure. Every pie ಜನ ಕೊಡತಕ್ಕ ತೆರಿಗೆ ಹಣ ಏನು ಶೇಖರಣೆ ಮಾಡುತ್ತೇವೆ, ಏನು ಖರ್ಚು ಮಾಡುತ್ತೇವೆ ಎನ್ನತಕ್ಕದ್ದು ಇಲ್ಲಿ ಚರ್ಚೆಯಾಗಿ ಅದಕ್ಕೆ ಸದನ ಒಪ್ಪಿಗೆಯನ್ನು ಕೊಡಬೇಕು. 203 ಕೋಟಿ ಬಗ್ಗೆ announce ಮಾಡಿದರಲ್ಲ, ಸದನಕ್ಕೆ ಚರ್ಚೆ ಮಾಡುವುದಕ್ಕೆ ಅವಕಾಶ

ಸಿಕ್ಕಿತ್ತೇ ಮಾನ್ಯ ಅಧ್ಯಕ್ಷರೆ? ಉತ್ತರ ಹೇಳುವಾಗ ಅವರಿಗೆ ಉತ್ತರ ಹೇಳುವುದಕ್ಕೆ ಅಧಿಕಾರ ಇದೆ. ಉತ್ತರ ಹೇಳಬೇಕು. ಆದರೆ 203 ಕೋಟಿ ಬಗ್ಗೆ announce ಮಾಡಿದರಲ್ಲ, without discussion of this Hon'ble House, without giving any opportunity to this House, ಅವರು ಉತ್ತರ ಹೇಳಿಬಿಟ್ಟರು. ಇದು ಈ ಸದನದ ಹಕ್ಕುಚ್ಯುತಿಗೆ ಬರುವುದಿಲ್ಲವೇ? ಇಲ್ಲಿ ಗೊತ್ತಿಲ್ಲದೇ, ಸದನಕ್ಕೆ ಗೊತ್ತಿಲ್ಲದ ಹಾಗೆ ಅಲ್ಲಿ 17 ಕೋಟಿ ರೂ.ಗಳ programmes ಗಳನ್ನು announce ಮಾಡಿಬಿಟ್ಟರು. ಹಾಗಾದರೆ ಅದನ್ನು ಸದನಕ್ಕೆ ತಿಳಿಸಬೇಕಾದ ಅಗತ್ಯವಿಲ್ಲವೇ? ಮತ್ತೆ ಏಕೆ ಈ ಸದನದಲ್ಲಿ ಮಾಡಿ ಅದನ್ನು ಈ ಸದನದ ಒಪ್ಪಿಗೆಯನ್ನು ಪಡೆದುಕೊಳ್ಳಬೇಕು ಎಂದು ಏಕಿದೆ?

ಒಂದು ವೇಳೆ ನೀವು ಬಜೆಟ್‌ನಲ್ಲಿ ಇಲ್ಲದೇ ಇರತಕ್ಕ ಹಣ ಒಂದು ರೂಪಾಯಿ ಹೆಚ್ಚಾಗಿ ಖರ್ಚು ಮಾಡಿದರೂ ಕೂಡ ಹೊಸ ಸೇವೆಗಳಿಗೆ ಅಥವಾ ದುಡ್ಡು ಸಾಲದೇ ಖರ್ಚು ಮಾಡಿದರೂ ಕೂಡ ಇಲ್ಲಿ supplementary estimates ಮೂಲಕ ಪಾಸ್ ಮಾಡಿಕೊಳ್ಳಬೇಕು. ಒಂದು ರೂಪಾಯಿ ಕೂಡ ನಾವು ಹೆಚ್ಚಾಗಿ ಖರ್ಚು ಮಾಡಿದರೂ ಬಜೆಟ್‌ನಲ್ಲಿ ಇವರಿಗೆ ಬಜೆಟ್‌ನಲ್ಲಿ ಕೊಟ್ಟಿರುವುದೇನು? ಇದನ್ನು ನೀವು ನೋಡಬೇಕು. Para 338 ರಲ್ಲಿ ಬಜೆಟ್ estimates 2007-08 ಎಂದು ಇದೆ. ಇದರಲ್ಲಿ ಏನು ಹೇಳಿದ್ದಾರೆ, estimated receipts expected receipts 47,927.08 ಕೋಟಿ. ಇದನ್ನು mention ಮಾಡಿದ್ದಾರೆ. ಖರ್ಚು ಸುಮಾರು 47,950.34 ಲಕ್ಷ ಎಂದು ಹೇಳಿದ್ದಾರೆ. ಈಗ ಇವರು 220 ಕೋಟಿ ಬಗ್ಗೆ ಹೇಳಿದರಲ್ಲ, ಅದನ್ನು ಎಲ್ಲಿ ತೋರಿಸಿದ್ದಾರೆ? ಇದರೊಳಗಡೆ ಇದೆಯೇ? ಇದಕ್ಕೆ ತಾನೇ ನಾವು ಒಪ್ಪಿಗೆ ಕೊಟ್ಟಿರುವುದು. 2007–08 ರಲ್ಲಿ ಕೊಟ್ಟಿರತಕ್ಕ estimates ಗೆ ಒಪ್ಪಿಗೆಯನ್ನು ಕೊಟ್ಟಿರುವುದು. ಇದರೊಳಗಡೆ ಎಲ್ಲಿ ಇವರು ಸೇರಿಸಿದ್ದಾರೆ? ಇದಲ್ಲದೇನೆ ಅವರು ಮಂಡಿಸಿರುವುದು. ಅದನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಮತ್ತೆ ಇವರು ಬಜೆಟ್ glance ನಲ್ಲಿ ನಮ್ಮದು surplus ಎಂದು ಹೇಳಿಕೊಳ್ಳುತ್ತಾರೆ, revenue expenditure ಕಳೆದರೆ ನಮಗೆ revenue surplus 1626.66 ಆಗುತ್ತದಲ್ಲ, Again this figure is going to be changed. 1626 ಕೋಟಿ revenue surplus ಆಗುತ್ತದೆಂದು ಹೇಳಿದ್ದಾರೆ.

203 ಕೋಟಿ ಎಲ್ಲಿಯೂ ನೀವು ಹೇಳದೇ ಉತ್ತರದಲ್ಲಿ ಹೇಳಿಬಿಟ್ಟು ಪಾಸ್ ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ appropriation bill ಮೂಲಕ

ಮಾಡಿಕೊಂಡರೆ all these figures are going to be changed. ಇಲ್ಲಿ ಕೊಟ್ಟಿರುವ ಎಲ್ಲ figures ಗಳೂ change ಆಗುತ್ತವೆ. Revenue Reciepts change ಆಗುತ್ತದೆ. Revenue estimates change ಆಗುತ್ತದೆ. Revenue expenditure change ಆಗುತ್ತದೆ. ಮತ್ತು all these figures are going to be changed. ಮತ್ತೆ ನಾವು 73 ಕೋಟಿ surplus ಉಳಿಕೆ ಬಜೆಟ್ ಎಂದು ಹೇಳಿದ್ದಾರಲ್ಲ, ಆಗ 73 ಕೋಟಿ ಏನಾಗುತ್ತೆ? 203 ಕೋಟಿಯಲ್ಲಿ ಇನ್ನೂ 73 ಕೋಟಿ ಕಳೆದುಬಿಟ್ಟರೆ ಆಗ ಮತ್ತೆ ಕೊರತೆ ಬಜೆಟ್ ಎಂದು ಆಗುತ್ತದಲ್ಲ. We cannot take it as a surplus budget. ಇಲ್ಲಿ ಮಂಡಿಸಿರತಕ್ಕಂಥ surplus budget ನಿಂದ 73 ಕೋಟಿ ಉಳಿತಾಯವಾಗುತ್ತದೆ. ನಮ್ಮ ಎಲ್ಲಾ ಖರ್ಚುಗಳನ್ನೆಲ್ಲವನ್ನೂ ಕಳೆದು, capital expenditure, revenue expenditure ಎಲ್ಲವನ್ನೂ ಕಳೆದು 73 ಕೋಟಿ ರೂಪಾಯಿಗಳಷ್ಟು ಮುಂದಿನ ವರ್ಷಕ್ಕೆ ನಮಗೆ ಪ್ರಾರಂಭ ಶಿಲ್ಕು ಆಗಿ ಉಳಿಯುತ್ತದೆ. ಆ 203 ಕೋಟಿ ರೂಪಾಯಿಗಳನ್ನು ಇಲ್ಲಿ ಸೇರಿಸಿಲ್ಲವಲ್ಲ. ಈ 203 ಕೋಟಿ ಮತ್ತು ಅಲ್ಲಿ ಮಾಡಿರತಕ್ಕಂಥ 17 ಕೋಟಿ ರೂಪಾಯಿಗಳನ್ನು ಸೇರಿಸಿದರೆ, 220 ಕೋಟಿ ಆಗುತ್ತದೆ. ಇದರಲ್ಲಿ 73 ಕೋಟಿ minus ಮಾಡಿದರೆ, ಎಷ್ಟು ಉಳಿಯುತ್ತದೆ? Deficit Budget ಆಗುತ್ತದೆ. Can you call it deficit budget or surplus budget? ಈ ಸದನದ ಮುಂದೆ ಇವೆಲ್ಲವನ್ನೂ ಇಡಬೇಕೇ? ಬೇಡವೇ?

ನೀವು ನಿಮ್ಮ ವಿಕಾಸ ಯಾತ್ರೆಗೋಸ್ಕರ, ನಿಮ್ಮ ರಾಜಕೀಯ ಲಾಭಕ್ಕೋಸ್ಕರವಾಗಿ, ಹೊರಗಡೆ ಹೇಳುವುದಕ್ಕೋಸ್ಕರವಾಗಿ ಇದನ್ನು ಮಂಡಿಸಿದ್ದೀರಾ? Without the approval of this House, ನೀವು ಒಂದು ವೇಳೆ ಮಾಡಬೇಕಾಗಿದ್ದರೆ, ನಿಮಗೆ ದುಡ್ಡು ಹೆಚ್ಚಾಗಿದ್ದಿದ್ದರೆ, ಜುಲೈನಲ್ಲಿ Supplementary Estimates ಬರುತ್ತಿತ್ತು, ಆಗ ನೀವು ಮಾಡಬಹುದಾಗಿತ್ತು. ಆಗ ಹೊಸ programmes announce ಮಾಡಬಹುದಾಗಿತ್ತು. Supplementary Estimates ಮಾಡುವುದಕ್ಕೆ ಅವಕಾಶವಿದೆ. ಈ ಸದನದ ಒಪ್ಪಿಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. All these new programmes announced by Mr.Yediyurappa, Hon'ble Finance Minister, ಇವೆಲ್ಲವನ್ನೂ supplementary ಯಲ್ಲಿ ಮಾತ್ರ ಹೇಳುವುದಕ್ಕೆ ಬರುವುದಿಲ್ಲ.

ನಿಮ್ಮ budget estimates, ಇಲ್ಲಿ ಕೊಟ್ಟಿರುವ Budget at a glance ಎಂದು ಹೇಳಿರತಕ್ಕಂಥ figures, all figures are going to be changed. ಹಾಗಾದರೆ, ಇದನ್ನು ಎಸೆದು ಬಿಡೋಣವೇ? ಹೊಸದಾಗಿ ನಾವು ಎಲ್ಲವನ್ನೂ ಬರೆದುಕೊಂಡು ಸೇರಿಸಿಕೊಳ್ಳಬೇಕೇ? Revenue Reciepts ಎಷ್ಟಾಯಿತು? Revenue Expenditure ಎಷ್ಟಾಯಿತು? Non-Developmental expenditure ಎಷ್ಟಾಯಿತು? Non-Plan expenditure ಎಷ್ಟಾಯಿತೆಂದು ನಾವು ಹೇಗೆ ಬರೆದುಕೊಳ್ಳುವುದು? ಅದನ್ನೆಲ್ಲವನ್ನೂ ನಾವು ಬರೆದುಕೊಂಡು ಕುಳಿತುಕೊಳ್ಳುವುದೇ? This type of precedent is very bad. ಇವರು ಬಜೆಟ್ ಮಂಡಿಸುವುದಕ್ಕಿಂತಲೂ ಮುಂಚಿತವಾಗಿ programmes ಅನ್ನು announce ಮಾಡಿಬಿಟ್ಟರು. ಅದು ಕೂಡ breach of provilege ಆಗುತ್ತದೆ. ಎಲ್ಲಾ programmes announce ಮಾಡಿಬಿಟ್ಟರು. ನಾವು ಸಾಲ ಮನ್ನಾ ಮಾಡುತ್ತೇವೆ, ಅದು ಮಾಡುತ್ತೇವೆ, ಇದು ಮಾಡುತ್ತೇವೆ, ಎಲ್ಲಾ ಮಾಡುತ್ತೇವೆಂದು ಹೇಳಿಬಿಟ್ಟರು. ಅದಾದ ಮೇಲೆ ಇಲ್ಲಿ ಮತ್ತೆ ಉತ್ತರ ಕೊಡುವಾಗ, ಇವರು ರಾಜಕೀಯ ಲಾಭ ಮಾಡಿಕೊಳ್ಳುವುದಕ್ಕೋಸ್ಕರವಾಗಿ, ಜೆ.ಡಿ(ಎಸ್) ನವರು ಬಿ.ಜೆ.ಪಿ.ಯವರ ಮೇಲೆ score ಮಾಡುವುದಕ್ಕೆ, ಬಿ.ಜೆ.ಪಿ.ಯವರು ಜೆ.ಡಿ(ಎಸ್) ಮೇಲೆ score ಮಾಡುವುದಕ್ಕೆ ಹೊರಟಿದ್ದಾರೆ.

ಖರ್ಗೆಯವರು ಇದನ್ನೇ ಹೇಳಿದರು. Without consulting the Chief Minister, without consulting the Cabinet, without taking approval of the Cabinet ಕಾರ್ಯಕ್ರಮಗಳನ್ನು ಘೋಷಿಸಿದ್ದಾರೆ. ನಾನೂ ಕೂಡ ಈ ರಾಜ್ಯದ ಹಣಕಾಸಿನ ಮಂತ್ರಿಯಾಗಿ ಒಟ್ಟು ಏಳು ಬಜೆಟ್‌ಗಳನ್ನು ಮಂಡಿಸಿದ್ದೇನೆ ಮತ್ತು ಹಿಂದಿನ ಅನೇಕ ಹಣಕಾಸಿನ ಮಂತ್ರಿಗಳು ಬಜೆಟ್‌ಗಳನ್ನು ಮಂಡಿಸಿರುವುದನ್ನು ನೋಡಿದ್ದೇನೆ. ಈ ತರಹ ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ ಮನಸೋ ಇಚ್ಛೆ, ಇವರ ಮನಸ್ಸಿಗೆ ಬಂದಂತೆ ಬಜೆಟ್ ಮಂಡಿಸಿರತಕ್ಕಂಥಾದ್ದು, ಕಾರ್ಯಕ್ರಮಗಳನ್ನು ಘೋಷಿಸಿರುವುದು, ಬಜೆಟ್ ಮಂಡಿಸಿದ ಮೇಲೆ ಕಾರ್ಯಕ್ರಮಗಳನ್ನು ಘೋಷಿಸಿರುವುದು, ಹಿಂದೆ ಎಂದೂ ಆಗಿಲ್ಲ. ಯಾವತ್ತೂ ಉತ್ತರ ಕೊಡುವಾಗ tax concessions ನಲ್ಲಿ ಏನಾದರೂ ಬಜೆಟ್‌ನಲ್ಲಿ ಹೇಳಿರತಕ್ಕಂಥಾದ್ದರಲ್ಲಿ ಕೆಲವು concessions ಕೊಡುವುದಕ್ಕೆ ಅವಕಾಶಗಳಿವೆ ಅಷ್ಟೆ. ಉತ್ತರ ಕೊಡುವಾಗ, ನಾವೆಲ್ಲರೂ ಸಲಹೆಗಳನ್ನು ಕೊಟ್ಟಾಗ, ಸದನದಲ್ಲಿ ಮಾನ್ಯ ಸದಸ್ಯರುಗಳೆಲ್ಲರೂ ಸಲಹೆಗಳನ್ನು ಕೊಟ್ಟಾಗ, ಅವರ

ಸಲಹೆ, ಅಭಿಪ್ರಾಯಗಳ ಮೇಲೆ ಹಣಕಾಸಿನ ಮಂತ್ರಿಗಳು ಅದನ್ನು consider ಮಾಡಬಹುದು. ಅದಕ್ಕೆ ರಿಯಾಯಿತಿಗಳನ್ನು ಕೊಟ್ಟಿದ್ದೇವೆಂದು ಹೇಳಬಹುದು.

ಅದು ಬಿಟ್ಟು 203 ಕೋಟಿ ರೂಪಾಯಿಗಳಿಗೆ ಮತ್ತೆ 17 ಕೋಟಿ, ಒಟ್ಟು 220 ಕೋಟಿ ರೂಪಾಯಿಗಳಾದರೆ, ಇವೆಲ್ಲವೂ ಈಗ change ಆಯಿತಲ್ಲ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ಈಗ 73 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇನ್ನು 203 ಕೋಟಿ ರೂಪಾಯಿಗಳನ್ನೂ ಲೆಕ್ಕಕ್ಕೆ ಸೇರಿಸಿಕೊಂಡರೆ ಏನಾಯಿತು? 160 ಕೋಟಿ ಖೋತಾ ಆಯಿತು. ಆದ್ದರಿಂದ, ಈ ಬಜೆಟ್ 160 ಕೋಟಿ ರೂಪಾಯಿಗಳ deficit budget ಎಂದಾಯಿತು. ಬಜೆಟ್ ಪುಸ್ತಕದಲ್ಲಿ ಆ ತರಹವೇನಾದರೂ ಇದೆಯೇ? ಆ ತರಹ ಹೇಳಿದ್ದಾರೆಯೇ? ಆಮೇಲೆ, plan ನಲ್ಲಿ 17,782 ಕೋಟಿ ರೂಪಾಯಿಗಳೆಂದು ಹೇಳಿದ್ದಾರೆ. ಇದನ್ನು approval plan size ಎಂದು ಹೇಳಿದ್ದಾರೆ.

ಮಾನ್ಯ ಅಧ್ಯಕ್ಷರೆ, ಇವರು ನಂಜುಂಡಪ್ಪನವರ ವರದಿಗೆ, ಅದರ ಪ್ರಕಾರ imbalance ಸರಿಪಡಿಸುವುದಕ್ಕೋಸ್ಕರವಾಗಿ ಈ ವರ್ಷ 1,571 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದಾರೆ. 17,782 ಕೋಟಿ ರೂಪಾಯಿಯಲ್ಲಿ 1,571 ಕೋಟಿ ರೂಪಾಯಿಗಳನ್ನು ಕಳೆದರೆ, ಇನ್ನು ಉಳಿಯುವುದು 16,100 ಕೋಟಿ ರೂಪಾಯಿಗಳು ಮಾತ್ರ. Then How can they claim that Rs.17,782 crores? How can they claim? Actually, 16,100 crores, i.e., less than last year's plan size. ಈ ರಾಜ್ಯವನ್ನು ವಿಕಾಸ ಮಾಡುವುದಕ್ಕೆ ಹೊರಟುಬಿಟ್ಟಿದ್ದಾರಲ್ಲ, ಇದರಿಂದ ವಿಕಾಸವಾಗುತ್ತದೆಯೇ? ನೀವು plan size ಅನ್ನೇ ಕಳೆದ ವರ್ಷಕ್ಕಿಂತಲೂ 16,166 ಕೋಟಿಗಿಂತಲೂ ಈ ವರ್ಷ ಕಡಿಮೆಯಾದರೆ, how can we expect growth in the State? How can anybody expect? ಯಾರಿಗೆ ಅರ್ಥಶಾಸ್ತ್ರದ ಜ್ಞಾನ ಇರಬೇಕಾಗಿತ್ತೋ, ಕನಿಷ್ಠ ಪ್ರಮಾಣದ ಸಾಮಾನ್ಯ ಜ್ಞಾನ ಇರತಕ್ಕಂಥವರು ಕೂಡ ಈ ರಾಜ್ಯದ ಬೆಳವಣಿಗೆತಯಾಗುತ್ತದೆಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ.ಪಿ. ರೇಣುಕಾಚಾರ್ಯ :- .... ಈಗ ಇವರು ಸದನದೊಳಗೆ ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ :- ಯಾರೂ ಕೂಡ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಹೇಗೆ ಹೇಳುತ್ತಾರೆ?

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ :- ..... ಯಾವ ರೈತರಿಗೆ ಬಡ್ಡಿ ಮನ್ನಾ ಮಾಡಿದರು?

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ :- ಈ ರಾಜ್ಯದ ಜನರಿಗೆ ಗೊತ್ತಿದೆ... ನೀವೆಲ್ಲರೂ ಭಾಷಣ ಮಾಡಿದಿರಿ ಎಂದರೆ ಯಾರೂ ಒಪ್ಪುವುದಿಲ್ಲ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ನಾವು ಇವರಿಂದ ಪಾಠ ಕಲಿಯಬೇಕಾಗಿಲ್ಲ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ನಾವು ಇವರಿಂದ ಪಾಠ ಕಲಿಯಬೇಕಾ?

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಒಬ್ಬ ಹಿರಿಯ ಮಾನ್ಯ ಸದಸ್ಯರು ಎದ್ದು ನಿಂತುಕೊಂಡು ಮಾತನಾಡುತ್ತಿದ್ದಾರೆ,....

(ಗೊಂದಲ)

ಅಧ್ಯಕ್ಷರು :- ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು :- ಕುಳಿತುಕೊಳ್ಳಿ.

ಶ್ರೀ ಎಂ.ಪಿ. ರೇಣುಕಾಚಾರ್ಯ :- ಹೇಳ್ತಿವ್ರಿ, ಇದನ್ನು ಜಾಲಾಡಿಸದೇ ಇಲ್ಲಿಗೇ ಬಿಡುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ :- ಮಾನ್ಯ ಅಧ್ಯಕ್ಷರೆ, ಇವರಿಗೆ un-parliamentary ಪದಗಳನ್ನು ನಾನೇನೂ ಬಳಸಿ ಮಾತನಾಡಲಿಲ್ಲ.

ಅಧ್ಯಕ್ಷರು :- ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ :- ಆಯಿತು, ಕುಳಿತುಕೊಳ್ಳಿ, ನೀವು ಭಾರೀ support ಮಾಡಿ. ನಾನು ಬೇಡವೆಂದು ಹೇಳುವುದಿಲ್ಲ.

ಅಧ್ಯಕ್ಷರು :- ಕುಳಿತುಕೊಳ್ಳಿ.

ಶ್ರೀ ಎಂ.ಪಿ. ರೇಣುಕಾಚಾರ್ಯ :- ಇಷ್ಟು ವರ್ಷ ಕಾಲ ಕಾಂಗ್ರೆಸ್ ಅನ್ನು ವಿರೋಧ ಮಾಡಿ... ನಮಗೆ ಸನ್ಮಾನ್ಯ ಸಿದ್ದರಾಮಯ್ಯನವರ ಬಗ್ಗೆ ಗೌರವವಿದೆ. ಅವರು ಕಾಂಗ್ರೆಸ್ ಅನ್ನು ವಿರೋಧ ಮಾಡಿದರು... ಇದೇ ಸಿದ್ದರಾಮಯ್ಯನವರು... ನಾವು ಅಕ್ಕಿ ಕಳ್ಳರು, ಭೂಗಳ್ಳರುಗಳನ್ನು ಒಳಗಡೆ ಹಾಕುತ್ತೇವೆಂದು ಹೇಳಿದರು. ಅದೇ ಸಿದ್ದರಾಮಯ್ಯನವರು ಇವತ್ತು ಕಾಂಗ್ರೆಸ್‌ನವರ ಜೊತೆ ಸೇರಿ ಅವರೊಂದಿಗೆ ಶಾಮೀಲಾಗಿದ್ದಾರೆ. ನಿಮಗೆ ಮಾತನಾಡುವುದಕ್ಕೆ ಯಾವುದೇ ಹಕ್ಕಿಲ್ಲ.

(ಗೊಂದಲ)

ಅಧ್ಯಕ್ಷರು :- ಕುಳಿತುಕೊಳ್ಳಿ. ಒಂದು ಸಲ ಹೇಳಿದರೆ ಆಯಿತು, ಎರಡು ಸಲ ಹೇಳಿದರೆ ಆಯಿತು. ಈಗ ಯಾರಾದರೊಬ್ಬರು ಗಂಭೀರವಾಗಿ ಮಾತನಾಡುತ್ತಿದ್ದರೆ, ಆಗಾಗ್ಗೆ ಮಧ್ಯ ಪ್ರವೇಶ ಮಾಡಬಾರದೆಂದು ಎಷ್ಟು ಸಲ ಹೇಳುವುದು? ಪ್ರೈಮರಿ ಸ್ಕೂಲ್ ಮಕ್ಕಳು ನಿಮಗಿಂತಲೂ ಎಷ್ಟೋ better ಆಗಿದ್ದಾರೆ.

ಶ್ರೀ ಸಿದ್ದರಾಮಯ್ಯ :- ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಕಾಸದ ಬಗ್ಗೆ ಮಾತನಾಡಿದ್ದಾರೆ. ಕರ್ನಾಟಕ ವಿಕಾಸ ಆಗಬೇಕೆಂದರೆ ನೀವು plan ನಲ್ಲಿ ಹೆಚ್ಚು ಹಣ ಖರ್ಚು ಮಾಡಬೇಕೆಂದು ಹೇಳುತ್ತಿದ್ದೇನೆ. ರಾಜ್ಯದ ಅಭಿವೃದ್ಧಿಯಾಗಬೇಕಾದರೆ ಚೆನ್ನಾಗಿ ಹಣ ಖರ್ಚು ಮಾಡಬೇಕೆಂದು ಹೇಳುತ್ತಿದ್ದೆ. ಅಭಿವೃದ್ಧಿ ಬಿಟ್ಟು ಇನ್ನಿತರೆ ಖರ್ಚು ಕಡಿಮೆ ಮಾಡಬೇಕೆಂದು ಹೇಳುತ್ತಿದ್ದೆ. Non plan expenditure ಅನ್ನು cut down ಮಾಡಬೇಕೆಂದು ಹೇಳುತ್ತಿದ್ದೆ. ಇದನ್ನು ಸಹಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೇ? ಇದನ್ನು ಹೇಳಿದರೆ ಅವರಿಗೇನು ಕಷ್ಟ, ಅವರಿಗೇನು ತೊಂದರೆ?

ಶ್ರೀ ಎಸ್. ಶಿವಣ್ಣ (ಮಾನ್ಯ ರೇಷ್ಮೆ ಸಚಿವರು) :- ತಾವಿದ್ದಾಗ ಮಾಡಲಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ :- ಹೌದಾ? ವಿರೋಧ ಪಕ್ಷದಲ್ಲಿದ್ದಾಗ ಮಾನ್ಯ ಶಿವಣ್ಣನವರೇ, ಅವರ ಭಾಷಣವನ್ನು ತಾವು ಸ್ವಲ್ಪ ತೆಗೆಸಿ ನೋಡಿ ಅವರು ಏನೇನು ಮಾತನಾಡಿದ್ದಾರೆಂದು, ಅವರು ವಿರೋಧ ಪಕ್ಷದಲ್ಲಿದ್ದಾಗ ನೀವು ಇದ್ದೀರಿ. ಆಗ ತಾವು ಸಹ ಮಾತನಾಡಬಹುದಾಗಿತ್ತಲ್ಲ. ತಾವು ಸಹ 3 ಸಲ ಗೆದ್ದಿದ್ದೀರಿ. ತಾವು ಸಹ seniour Member of this House. ನಿಮಗೆಲ್ಲಾ ಅವಕಾಶವಿತ್ತಲ್ಲ ಸ್ವಾಮಿ. ನಾನು ಯಾರಿಗೂ ಅಗೌರವದಿಂದ, ಅಗೌರವ ಮಾಡಬೇಕೆಂದು ಮಾತನಾಡುತ್ತಿಲ್ಲ. ಒಂದು Plan size 17,782 ಕೋಟಿ ಈ ಸಾರಿ ಇದೆ. The plan size approved by the Planning Commission ಅಂತ ನಾನು ಹೇಳುತ್ತಿದ್ದೆ. Is it not a fact? It is a fact. ಅದರಲ್ಲಿ ಡಾ॥ ನಂಜುಂಡಪ್ಪನವರ ವರದಿ ಅಭಿವೃದ್ಧಿಗೋಸ್ಕರವಾಗಿ, Regional imbalance ತಪ್ಪಿಸುವುದಕೋಸ್ಕರವಾಗಿ 1571 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ಹೇಳಿ ನಿಮ್ಮ action plan ಅನ್ನು ಕೊಟ್ಟಿದ್ದೀರಿ. ಆ action plan ನಲ್ಲಿ ಎಲ್ಲಿಯೂ ಕೂಡ 17,782 ಕೋಟಿ ಕೊಟ್ಟಿರುವುದು ಬಿಟ್ಟರೆ, ಬಜೆಟ್‌ನಲ್ಲಿ additinality ಯಲ್ಲಿ ಕೊಟ್ಟಿಲ್ಲ. ನಿಮ್ಮ plan size ಒಳಗಡೆಯೇ ಇದೆ. ಅದನ್ನು ಕಳೆದರೆ, ನಂಜುಂಡಪ್ಪ ವರದಿಗೆ ಕೊಟ್ಟಿರುವುದನ್ನು ಕಳೆದರೆ, the general plan size would be Rs.16,211 crore. 2006-07ಕ್ಕೆ plan size 16,166 ಕೋಟಿ. The difference is about Rs.60 crore. ಇದರಿಂದ ರಾಜ್ಯ ವಿಕಾಸವಾಗುತ್ತದೆಯೇ? ರಾಜ್ಯದ ವಿಕಾಸ ಹೇಗೆ ಆಗುತ್ತದೆ? ನಾವು ಹೇಳಿದ್ದೇನು ಅಂದರೆ ಈಗಾಗಲೇ ಈ ವರ್ಷ 11th five Year Plan ಪ್ರಾರಂಭವಾಗಿದೆ. 96,703 ಕೋಟಿ ಮುಂದಿನ 5 ವರ್ಷಗಳಲ್ಲಿ ಈ ವರ್ಷವೂ ಸೇರಿ, 5 ವರ್ಷಗಳಲ್ಲಿ, ನಾವು ಆ plan ಅನ್ನು achieve ಮಾಡಬೇಕು. ಹಾಗಿದ್ದರೆ ಮಾತ್ರ ನಾವು ರಾಜ್ಯದಲ್ಲಿ ಸುಮಾರು 9% ಅಥವಾ 10% GDP growth ಮಾಡುವುದಕ್ಕೆ ಸಾಧ್ಯವಾಗುತ್ತದೆ.

ನಾವು ಸಂಪತ್ತನ್ನು ಉತ್ಪನ್ನ ಮಾಡುವುದನ್ನು ಬಡವರಿಗೆ ದಲಿತರಿಗೆ, ಯಾರು ಸಾಮಾಜಿಕ ನ್ಯಾಯದಿಂದ ವಂಚಿತರಾಗಿರತಕ್ಕಂತಹವರಿಗೂ ಕೂಡ ಕೊಟ್ಟು ಅವರ ಜೀವನದ ಗುಣ ಮಟ್ಟವನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂತಹ ದೃಷ್ಟಿಯಿಂದ ಅಷ್ಟೊಂದು ಮಾಡಿದ್ದಾರೆ. ಅದರ ಪ್ರಕಾರ ಕನಿಷ್ಟ ಈ

ವರ್ಷ plan size 20 ಸಾವಿರ ಕೋಟಿ ಇರಬೇಕಾಗಿತ್ತು. ಅದು ಯಾವ ರೇಟ್ ಮೇಲೆ ಮಾಡಿದ್ದಾರೆ? 2006-07ರ ರೇಟ್ ಮೇಲೆ ಆ plan size ಅನ್ನು approve ಮಾಡಿರುವುದು. ಮುಂದಿನ ವರ್ಷಕ್ಕೆ ಜಾಸ್ತಿಯಾಗುತ್ತದೆ, ಈ ವರ್ಷ ಜಾಸ್ತಿಯಾಗುತ್ತದೆ. ಏಕೆಂದರೆ ಈ ವರ್ಷ ಆರೂವರೆ ಪರ್ಸೆಂಟ್ inflation ಇದೆ. ಮತ್ತೆ last yearಗೂ ಈ ವರ್ಷಕ್ಕೂ plan size ನಲ್ಲಿ, there is no difference at all. Status - quo is going to be maintained. ನೀವು inflation ಅನ್ನು ಏನಾದರೂ ತೆಗೆದು ಹಾಕಿದರೆ ಅದು ಇನ್ನೂ ಕಡಿಮೆಯಾಗುತ್ತದೆ. ಇದು concealing, Transparency ಇಲ್ಲವೇ ಇಲ್ಲ. ಇದು ಒಂದು. ನಾನು ಏಕೆ ಹೇಳುತ್ತಿದ್ದೇನೆಂದರೆ ನಾನು ಈಗಾಗಲೇ ಪ್ಯಾರಾ 338 ಓದಿದೆನಲ್ಲಾ ಈ ಪ್ಯಾರಾದಲ್ಲಿ ಎಲ್ಲಾ ಹೇಳಿದ್ದಾರೆ. ಆಮೇಲೆ page 106 ರಲ್ಲಿ 'Budget at a glance' ಇದರಲ್ಲಿ ಹೇಳಿದ್ದಾರೆ. ಈ Budget at a glance ನಲ್ಲಿ surplus ಎಷ್ಟು ಎಂದು ಹೇಳಿದ್ದೀರಿ? ಈ 220 ಕೋಟಿಯನ್ನು ಅದಕ್ಕೆ ಸೇರಿಸಿಕೊಂಡರೆ surplus ಎಷ್ಟಾಗುತ್ತದೆ? 73 ಕೋಟಿ surplus ಅಂತ ಹೇಳಿದ್ದೀರಿ. ಅಂತಿಮ ಶಿಲ್ಕು 73 ಕೋಟಿ, ಉಳಿತಾಯ ಬಜೆಟ್, 220 ಕೋಟಿ ಸೇರಿಸಿಕೊಂಡರೆ ಎಷ್ಟಾಗುತ್ತದೆ? ಇವೆಲ್ಲಾ, all these figures are going to be changed. ಮತ್ತೆ ಈ ಪುಸ್ತಕಕ್ಕೆ ಏನು ಬೆಲೆ? ಈ ಬಜೆಟ್ Article 202 ಅಡಿ ಮಂಡಿಸಿದ್ದೀರಲ್ಲ, ಇದಕ್ಕೇನು ಬೆಲೆ? ಏರಡೂವರೆ ಗಂಟೆಗಳ ಕಾಲ ಓದಿದ್ದು ಇದೇನಾ?

ಈಗ ಇವರು ಏನು ಫೋಟೋ ಬಂದು ಬಿಡುತ್ತದೆ. ಕರ್ನಾಟಕ ರಾಜ್ಯ ವಿಕಾಸ ಮಾಡುವುದಕ್ಕೆ ಹೊರಟಿದ್ದಾರೆಂದ ತಕ್ಷಣವೇ ಕಾಂಗ್ರೆಸ್ ನವರ ಬಗ್ಗೆ ಅಷ್ಟೊಂದು, ಹೊರಗಡೆ ಹೋಗಿ, ಇಲ್ಲಿ ಅಸೆಂಬ್ಲಿ ನಡೆಯುತ್ತಿದೆ. ಕಾಂಗ್ರೆಸ್‌ನವರು ಬೀದಿಗೆ ಬರಲಿ ಬಡಗಿ ತೆಗೆದುಕೊಂಡು ಹೊಡೆಯುತ್ತಾರೆ. ಅಂತೆಲ್ಲಾ ಹೇಳಿದ್ದಾರೆ. ತಾವಿನ್ನೂ ವಿರೋಧಪಕ್ಷದಲ್ಲಿಯೇ ಇದ್ದೀರಾ ಯಡಿಯೂರಪ್ಪನವರೇ? ನಾವು ಉಪಯೋಗಿಸುವ ಪದಗಳನ್ನು ನೀವೇ ಉಪಯೋಗಿಸುವುದಕ್ಕೆ ಶುರು ಮಾಡಿಕೊಂಡಿದ್ದೀರಿ. ಅವರು ಬರಲಿ ಹೊರಗಡೆಗೆ, ಬೀದಿಗೆ ಬರಲಿ ಜನರ ಹತ್ತಿರ, ಬಡಗಿ ತೆಗೆದುಕೊಂಡು ಹೊಡೆಯುತ್ತಾರೆ ಜನ. ನಡೀರಿ ಹೋಗೋಣ. ಜೊತೆಯಲ್ಲಿಯೇ ಹೋಗೋಣ ನಿಮ್ಮ ಬಜೆಟ್ ಬಗ್ಗೆ ಚರ್ಚೆ ಮಾಡುವುದಕ್ಕೆ. ಅದು ಹೇಗೆ ಹೊಡೆಯುತ್ತಾರೋ ನಮಗೆ. ಈ ಬಜೆಟ್ ಬಗ್ಗೆಯೇ ಚರ್ಚೆ ಮಾಡುವುದಕ್ಕೆ ಹೋಗೋಣ ನಡೀರಿ.

ಶ್ರೀ ಕೆ. ಶ್ರೀನಿವಾಸಗೌಡ :- ಇವರಿಗೆ ಹೊಡೆಯುವುದಕ್ಕೆ ಹೋಗಿ ನಿಮಗೆಲ್ಲಾದರೂ ಬಿದ್ದುಬಿಟ್ಟಾತು ಅದನ್ನು ಯೋಚನೆ ಮಾಡಿ.

ಶ್ರೀ ಸಿದ್ದರಾಮಯ್ಯ :- ಏನು? ಈ ತರಹ ಹೇಳಬಹುದಾ? ಅಸೆಂಬ್ಲಿ ನಡೆಯುತ್ತಿದೆ. ಎಲ್ಲಾ ಕಾಂಗ್ರೆಸ್‌ನವರು ಲೂಟಿ ಮಾಡಿಬಿಟ್ಟರು ಅಂತ. ಇವತ್ತು ನೀವು ಕೇಂದ್ರ ಸರ್ಕಾರದಲ್ಲಿ ಕಾಂಗ್ರೆಸ್‌ನವರೇ ಹಣಕಾಸಿನ ಮಂತ್ರಿ ಇರುವುದು. ಅಲ್ಲಿ 21 ಸಾವಿರ ಕೋಟಿ ಹೋದ ವರ್ಷ ಹೇಗೆ ಜಾಸ್ತಿಯಾಯಿತು? ನೀವು ಲೆಕ್ಕ ಹಾಕಿದ್ದಕ್ಕಿಂತ ಜಾಸ್ತಿ ತೆರಿಗೆ ಬಂತಲ್ಲ ಹೇಗೆ ಬಂತು? ಅವರು ಹೆಚ್ಚು ತೆರಿಗೆ ವಸೂಲು ಮಾಡಿದ್ದರಿಂದ ಅಲ್ಲವೇ? ಅಲ್ಲಿ ತೆರಿಗೆ ಹೆಚ್ಚಾಗಿದ್ದಕ್ಕೆ ಅಲ್ಲವೇ ಇಲ್ಲಿ ನಮ್ಮ ಷೇರು ಜಾಸ್ತಿ ಬಂದಿದ್ದು? ಅಲ್ಲಿ ತೆರಿಗೆ ಹೆಚ್ಚಾಗಿದ್ದಕ್ಕೆ ಅಲ್ಲವೇ ನಮಗೆ grants ಜಾಸ್ತಿ ಬಂದಿರುವುದು? 3200 ಕೋಟಿ ಚಿಲ್ಲರೆ tax ಮತ್ತು grants ನಲ್ಲಿ ಹೆಚ್ಚು ಬಂತಲ್ಲ, ಅಲ್ಲಿ ಹೆಚ್ಚಾಗಿದ್ದಕ್ಕೆ ಅಲ್ಲವೇ? ಕರ್ನಾಟಕದಲ್ಲಿ ನಾವೊಬ್ಬರೇ. ಇಡೀ ದೇಶದಲ್ಲಿ ಇನ್ಯಾರು ಇಲ್ಲ. 2004-05ರಲ್ಲಿ ಎಷ್ಟು ಪರ್ಸೆಂಟ್ ಬಂದಿದೆ ಅಂತ ತೆಗೆದು ಹೇಳಿ. ನಿಮ್ಮದು tax growth around 20% ಇದೆ. As a matter of fact, ಅದು 30% ಆಗಬೇಕಾಗಿತ್ತು. ಏಕೆಂದರೆ 01-04-2005 ರಿಂದ VAT ಜಾರಿಗೆ ಬಂದಿದೆ. Tax base was widened, seconds ಕಡಿಮೆಯಾಗಿದೆ. ನಂಬರ್ 2 ಬಿಲ್ಸ್ ಕಡಿಮೆಯಾಗುತ್ತಿವೆ. After introduction of VAT in the State, No.2 Bills ಕಡಿಮೆಯಾಗುತ್ತಿವೆ. Tax base ಹೆಚ್ಚಾಗುತ್ತಿವೆ. ಅದಾದ ಮೇಲೆ ಇನ್ನೂ ಹೆಚ್ಚು ತರಿಗೆ ಬರಬೇಕಲ್ಲ.

ನಾವಿರುವಾಗ 2004-05ರಲ್ಲಿ ಬಜೆಟ್ ಮಂಡಿಸಿದಾಗ 26% ಇತ್ತು. Check up ಮಾಡಿ ಹೇಳಿ. 26% growth ಇತ್ತು ಟ್ಯಾಕ್ಸ್. ನಿಮಗೆ ಈಗ Land value ಜಾಸ್ತಿಯಾಗಿದೆ. ಕಳೆದ ಎರಡು ವರ್ಷದಲ್ಲಿ 2 ಪಟ್ಟು 3 ಪಟ್ಟು land value ಜಾಸ್ತಿಯಾಗಿದೆ. Stamps and Registration ನಲ್ಲಿ ದುಡ್ಡು ಅದಾಗಿಯೇ ಬರುತ್ತದೆ. ನೀವೇನೂ ಕಷ್ಟ ಪಡುವಂತಿಲ್ಲ. 60% growth. Vehicles ನಲ್ಲಿ ದಿನಾ ದಿನಾ 30% ಜಾಸ್ತಿ ಬರುತ್ತದೆ. ಪ್ರತಿ ದಿನ Vehicle Registration ಜಾಸ್ತಿಯಾಗುತ್ತಿವೆ. ಅದು ನಿಮ್ಮ ಶ್ರಮವೇ? Land Value ಜಾಸ್ತಿಯಾಗಿದ್ದು ಇವರ ಶ್ರಮವೇ? ಅವರು ಏನು ಹೇಳಿದರೆಂದರೆ ನಮ್ಮ ಕಾಲದಲ್ಲಿ ಇಷ್ಟು ತೆರಿಗೆ ಬಂದಿದೆ. ಕಾಂಗ್ರೆಸ್‌ನವರ ಕಾಲದಲ್ಲಿ ನುಂಗಿಬಿಡುತ್ತಿದ್ದರು ಎಲ್ಲವನ್ನು ಅಂತ ಹೇಳುತ್ತಾರಲ್ಲ.

ಶ್ರೀ ಎಂ.ಪಿ. ಪ್ರಕಾಶ್ :- There is buoyancy in the entire industrial sector ಅನ್ನುವಂಥ concept ಇದೆ. Same thing that you are also reaping in the Central Government and we are also doing. ಅವರ ಶ್ರಮ ಅಂದರೆ ದಕ್ಷವಾಗಿ ನಡೆಸಿದ್ದಾರೆ ಅಂತ ಹೇಳಿ.

ಶ್ರೀ ಸಿದ್ದರಾಮಯ್ಯ :- ಹಾಗಂತ ಹೇಳಿ ಯಡಿಯೂರಪ್ಪನವರು ಕಾಂಗ್ರೆಸ್‌ನವರ ಮೇಲೆ ಆರೋಪ ಹೊರಿಸಬೇಕೆಂದು ಎಲ್ಲಿದೆ?

ಶ್ರೀ ಎಂ.ಪಿ. ಪ್ರಕಾಶ್ :- ಮಾಡಬಾರದು.

ಶ್ರೀ ಎಸ್. ಶಿವಣ್ಣ :- ಅವರು 50 ವರ್ಷದಿಂದ ಸರ್ಕಾರ ನಡೆಸಿದ್ದಾರೆ.

ಶ್ರೀ ಸಿದ್ದರಾಮಯ್ಯ :- ಆಯಿತು ಇರಿ ಸ್ವಾಮಿ. ನಿಮಗೂ 50 ವರ್ಷವಾಗುತ್ತೆ. ನೀವು ಹೇಳಿದಿರಿ. "The country is shining, India is shining". ಸುಮ್ಮನೆ ಏತಕ್ಕೆ ಇವೆಲ್ಲಾ ಹೇಳುತ್ತೀರಿ? ಇವತ್ತು ಕೂಡ ಬಡತನದಲ್ಲಿ ನಾವು 7ನೇ ಸ್ಥಾನದಲ್ಲಿರುವುದು. ಇಡೀ ದೇಶದಲ್ಲಿ ನಮ್ಮ Human development index 127 ನೇ ಸ್ಥಾನ ನಮ್ಮದು. ಸುಮ್ಮನೇ ಇವೆಲ್ಲಾ ಹೇಳುವುದಕ್ಕೆ ಹೋಗುವುದು ಬೇಡ. ರಾಜಕೀಯಕ್ಕೋಸ್ಕರ ಭಾಷಣದಲ್ಲಿ ಏನು ಬೇಕಾದರೂ ಹೇಳಲಿಕ್ಕಾಗುವುದಿಲ್ಲ. ವಸ್ತು ಸ್ಥಿತಿ ಏನು ಎಂಬುದನ್ನು ಮಾತ್ರ ಹೇಳಬೇಕಾಗುತ್ತದೆ. National sample survey ಯವರು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಕರ್ನಾಟಕದಲ್ಲಿ ಎರಡು ಹೊತ್ತಿನ ಕೂಳಿಲ್ಲದ 1 ಕೋಟಿ 39 ಲಕ್ಷ ಜನ ಬಡವರಿದ್ದಾರೆ....

(ಗೊಂದಲ)

ಬಡವರ ಸಂಖ್ಯೆ ಎಷ್ಟಿದೆ? ಎಂಬುದನ್ನು ನೀವಾದರೂ ಹೇಳಿ.

(ಗೊಂದಲ)

ದಯವಿಟ್ಟು ಕುಳಿತುಕೊಳ್ಳಿ. ಏಕೆ ಸುಮ್ಮನೆ ಎದ್ದು ನಿಂತು ನನ್ನ ಮಾತಿಗೆ ಅಡ್ಡಿಪಡಿಸುತ್ತೀರಿ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- .... ಬಜೆಟ್ ಮೇಲೆ ಸುದೀರ್ಘವಾಗಿ ಮಾತನಾಡಲಿಕ್ಕೆ ಆಗುವುದಿಲ್ಲ, ನಾವು ಮಾತನಾಡುವುದನ್ನೇ ಬಿಟ್ಟು ಬಿಡಬೇಕಾಗುತ್ತದೆ. ನಾವು serious ಆಗಿ ಮಾತನಾಡುವುದು ಕೂಡ ಇದರಿಂದ ಹೋಗಿ ಬಿಡುತ್ತದೆ.

ನಾನು ಮಾನ್ಯ ಯಡಿಯೂರಪ್ಪನವರ ಮೈಲೆ ವೈಯಕ್ತಿಕವಾಗಿ ಆರೋಪ ಮಾಡಲಿಲ್ಲ. ನಾನೇನು ಹೇಳುತ್ತೇನೆ ಎಂದರೆ, tax buoyancy is there in the country. It is a common phenomenon in all the States. ನಮ್ಮ Stateನವರು ಸ್ವಲ್ಪ ಮುಂದಿರಬಹುದು, ಒಂದೆರಡು ಪರ್ಸೆಂಟ್ ಹೆಚ್ಚಾಗಿರಬಹುದು. But, tax buoyancy is a common factor to the Central Government and to all the State Governments. ಬಿಹಾರ ಅಥವಾ ಯು.ಪಿ.ನಲ್ಲಿ 4–10% ಇರಬಹುದು. But, Gujarat, Maharashtra, Tamilnadu, Andhra, Kerala, Karnataka, Punjab, Haryana ಈ ಎಲ್ಲಾ ರಾಜ್ಯಗಳಲ್ಲಿ tax ನಲ್ಲಿ around 20% growth ಇದೆ. My submission is, ಇವತ್ತು Economic Reforms ಆದಮೇಲೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು Fiscal Responsibility Act ಅನ್ನು ತಂದು, Fiscal correction and Fiscal consolidation ಅನ್ನು ದೇಶದಲ್ಲಿ ಮತ್ತು ರಾಜ್ಯದಲ್ಲಿ ಮಾಡಿದ ಮೇಲೆ, ಈ ಬೆಳವಣಿಗೆ natural growth ಆಗುತ್ತಿದೆ. ನಾವು ಶ್ರಮ ಪಟ್ಟರೆ ನಮಗೆ ಇನ್ನೂ ಜಾಸ್ತಿ ಬರುತ್ತದೆ. ಸೋರಿ ಹೋಗುವುದನ್ನೆಲ್ಲಾ ತಪ್ಪಿಸಲಿಕ್ಕೆ ಪ್ರಯತ್ನ ಪಟ್ಟರೆ, ನಮ್ಮಲ್ಲಿ ಇನ್ನೂ ಜಾಸ್ತಿ growth ಆಗುತ್ತದೆ. ಕರ್ನಾಟಕದಲ್ಲಿ ಇನ್ನೂ ಜಾಸ್ತಿ ಮಾಡಲಿಕ್ಕೆ ಸಾಧ್ಯವಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ. 5 ಸಾವಿರ ಕೋಟಿಗೂ ಹೆಚ್ಚು ಟ್ಯಾಕ್ಸ್ ಕಲೆಕ್ಟ್ ಮಾಡಿದ್ದೇವೆ ಎಂದು ಸುಮ್ಮನೆ ಬೆನ್ನು ತಟ್ಟಿಕೊಳ್ಳುವುದು ಸರಿಯಲ್ಲ. 2005–06ಕ್ಕೆ ಹೋಲಿಸಿದರೆ, ಕೇವಲ 4 ಸಾವಿರ ಕೋಟಿ ಚಿಲ್ಲರೆ ಟ್ಯಾಕ್ಸ್ ಅನ್ನು ಮಾತ್ರ ಹೆಚ್ಚಿಗೆ ಸಂಗ್ರಹಿಸಲಾಗಿದೆ. ಕೇಂದ್ರ ಸರ್ಕಾರದಿಂದ ಸಹ ರಾಜ್ಯಕ್ಕೆ ತೆರಿಗೆ ಪಾಲಿನ ಹಣ ಬಂದಿದೆ.

ನಿಮ್ಮ expected estimates ಪ್ರಕಾರ 2005–06ನೇ ಸಾಲಿಗಿಂತ 2006–07ನೇ ಸಾಲಿನಲ್ಲಿ ಒಟ್ಟು 7506 ಕೋಟಿ ರೂಪಾಯಿಗಳು ಹೆಚ್ಚಾಗಿ ತೆರಿಗೆ ಬಂದಿದೆ. ಅದರಲ್ಲಿ 3200 ಚಿಲ್ಲರೆ ಕೋಟಿ ರೂ.ಗಳು ಕೇಂದ್ರ ಸರ್ಕಾರದಿಂದ ಬಂದಿದೆ. ಇನ್ನುಳಿದ 4,200 ಕೋಟಿ ರೂ.ಗಳು ರಾಜ್ಯದ ಟ್ಯಾಕ್ಸ್ ಆಗಿದೆ. ಅದು buoyancy. ಅದು ತೆರಿಗೆ ಬೆಳವಣಿಗೆ ಆಗಿರುವುದು. I am not disputing this. ನಿಮ್ಮ ಕಾಲದಲ್ಲಿ ತೆರಿಗೆ ಬೆಳವಣಿಗೆ ಆಗಲಿಲ್ಲವೆಂದು ನಾನು ಹೇಳಲಿಲ್ಲ. But, it is a general tendency in the entire country. This is the economic situation in the entire Nation..

(ಗೊಂದಲ)

ಬಜೆಟ್ ಅಂದರೆ ನಿಮಗೇನೂ ಗೊತ್ತಿಲ್ಲ. ಹೀಗಿರುವಾಗ ನಿಮಗೆ ನಾನೇನು ಹೇಳಲಿ?

(ಗೊಂದಲ)

ಅಧ್ಯಕ್ಷರು :- ಪದೇ ಪದೇ ಏಕೆ ಎದ್ದು ನಿಂತುಕೊಳ್ಳುತ್ತೀರಿ? ಯಾವುದಾದರೂ ಚರ್ಚೆಯಾದಾಗ, ನಾನು ಯಾರಿಗೆ ಅವಕಾಶ ಕೊಡುತ್ತೇನೋ, ಅವರು ಮಾತನಾಡುತ್ತಾರೆ.

(ಗೊಂದಲ)

ದಯವಿಟ್ಟು ಕುಳಿತುಕೊಳ್ಳಿ. ಒಂದು ಸಾರಿ ಹೇಳಬಹುದು, ಎರಡು ಸಾರಿ ಹೇಳಬಹುದು. ಮಧ್ಯೆ ಮಧ್ಯೆ ಏಕೆ ನೀವು ಪ್ರವೇಶ ಮಾಡುತ್ತಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಅವರೇನಾದರೂ ತಪ್ಪು ಹೇಳಿದ್ದರೆ, un-parliamentary word ಹೇಳಿದ್ದರೆ, ಆಗ ನೀವು ಎದ್ದು ನಿಂತು ಅದರ ಬಗ್ಗೆ ಆಕ್ಷೇಪಿಸಿದ್ದರೆ ಅರ್ಥ ಇರುತ್ತದೆ. ಅದನ್ನು ಬಿಟ್ಟು ಸುಮ್ಮನೆ ಏಕೆ ಎದ್ದು ನಿಲ್ಲುತ್ತೀರಿ? ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಬಜೆಟ್‌ಗೆ ಮತ್ತು ಅರ್ಥಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಅವರು ಹೇಳಿದ್ದಾರೆ. ಅದರಲ್ಲಿ ಏನಾದರೂ ತಪ್ಪಾಗಿದ್ದರೆ, ಅದರ ಬಗ್ಗೆ ಮಾನ್ಯ ಹಣಕಾಸಿನ ಸಚಿವರು ಹೇಳುತ್ತಾರೆ. ನೀವು ಸುಮ್ಮ ಸುಮ್ಮನೆ ಎದ್ದು ನಿಂತುಕೊಳ್ಳುವುದು ಸರಿಯಲ್ಲ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ,....

ಶ್ರೀ ಸಿದ್ದರಾಮಯ್ಯ :- ನಾನು ನನ್ನ ಮಾತು ಮುಗಿಸಿಬಿಡುತ್ತೇನೆ. ಆನಂತರ ತಾವು ಅದಕ್ಕೆ ಉತ್ತರ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ಉತ್ತರ ಕೊಡುತ್ತಿಲ್ಲ, ನಾನು ಹೆಚ್ಚು ಮಾತನಾಡುವುದಿಲ್ಲ. ಸಾರ್, ಪ್ರಾಮಾಣಿಕವಾಗಿ ಹೇಳುವುದಾದರೆ, ಹಣಕಾಸಿನ ಸಚಿವನಾಗಿ ಮಾನ್ಯ ಸಿದ್ದರಾಮಯ್ಯನವರಿಗೆ ಇರುವಷ್ಟು ಪರಿಣಿತಿ ಮತ್ತು ಅನುಭವ ನನಗೆ ಇಲ್ಲ. ಇಲ್ಲಿ ಪ್ರಶ್ನೆ ಏನೆಂದರೆ, ಬೇರೆ ಬೇರೆ ಕಾರಣಕ್ಕೆ ಬಜೆಟ್ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಿರಲಿಲ್ಲ, ಈಗಲಾದರೂ ಆಗಲಿ. ಇನ್ನೂ ಮೂರು ದಿವಸ ಅಧಿವೇಶನ ನಡೆಸಿ. ತಾವು ಚರ್ಚೆ ಮಾಡಿ, ಬೆಳಕು ಚೆಲ್ಲಿ. ನಾನೇನು ಹೊಸ ಹೊಸ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದೇನೆ, ಅದರ ಬಗ್ಗೆಯೂ ಚರ್ಚೆ ಮಾಡಿ. ಯಾವುದಕ್ಕೆ ಹಣ ಕೊಟ್ಟಿದ್ದೇನೆ, ಯಾವುದಕ್ಕೆ ಕೊಡಬಾರದು ಎಂಬುದನ್ನು ಹೇಳಿ. ನಾನು ಕೊಟ್ಟಿದ್ದರ ಬಗ್ಗೆ ಈ ಮನೆ ಒಪ್ಪದಿದ್ದರೆ, ಅದನ್ನು ವಾಪಸ್ ತೆಗೆದುಕೊಳ್ಳಲಿಕ್ಕೂ ನಾನು ಸಿದ್ಧನಿದ್ದೇನೆ. ಆದರೆ, Privilege ಬಗ್ಗೆ ಸೀಮಿತವಾಗಿ ಚರ್ಚೆಯಾದರೆ, ಆಮೇಲೆ ಬಜೆಟ್ ಬಗ್ಗೆ, ಇತರೆ ವಿಷಯಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಅನುಕೂಲವಾಗುತ್ತದೆ. Privilege ಏನಾಗಿದೆ ಎಂದು ಹೇಳಿದರೆ, ನಾನು ಅದಕ್ಕೆ ಉತ್ತರ ಕೊಡುತ್ತೇನೆ. ಆಮೇಲೆ, ಅದರ ಬಗ್ಗೆ ನೀವು ತೀರ್ಮಾನ ತೆಗೆದುಕೊಳ್ಳಿ. ನಂತರ ನಾವು ಚರ್ಚೆ ಮುಂದುವರೆಸೋಣ.

ಶ್ರೀ ಸಿದ್ದರಾಮಯ್ಯ :- ಮಾನ್ಯ ಅಧ್ಯಕ್ಷರೆ, ನಾನು ಈಗ entire budget ಬಗ್ಗೆ ಇಲ್ಲಿ ಮಾತನಾಡುತ್ತಿಲ್ಲ. ನಾನೇನು ಹೇಳುತ್ತಿದ್ದೇನೆ ಎಂದರೆ, ಅವರು ವಿರೋಧ ಪಕ್ಷದಲ್ಲಿ ಬಹಳ ದೀರ್ಘವಾಗಿ ಕೆಲಸ ಮಾಡಿರತಕ್ಕವರು. ಅವರೂ ಕೂಡ, ನಾನು ನೋಡಿದ್ದೇನೆ, ನಾನು ಬಜೆಟ್ ಮಂಡಿಸಿದಾಗ, ಇಲ್ಲಿ ಕುಳಿತುಕೊಂಡು ಬಹಳ ಸಲ ಬಜೆಟ್ ಮೇಲೆ debate initiate ಮಾಡಿ, 2-3 ಗಂಟೆಗಳ ಕಾಲ ಮಾತನಾಡಿದ್ದಾರೆ. ಬಹಳ ಆವೇಶದಿಂದ ಮಾತನಾಡಿದ್ದಾರೆ, ಜಗಳ ಆಡುವವರ ತರಹವೇ ಮಾತನಾಡಿದ್ದಾರೆ, ಮುಖವೆಲ್ಲಾ ಕೆಂಪಗೆ ಮಾಡಿಕೊಂಡು ಮಾತನಾಡಿದ್ದಾರೆ. ಅವೆಲ್ಲವನ್ನೂ ಅವರು ಮಾಡಿದ್ದಾರೆ. ನೀರಾವರಿಗೆ ದುಡ್ಡು ಕೊಟ್ಟಿಲ್ಲ ಎಂಬುದನ್ನೆಲ್ಲಾ ನಾವು ಸಾಕಷ್ಟು ಸಾರಿ ಹೇಳಿಬಿಟ್ಟಿದ್ದೇವೆ. ಈಗ ಅದರ ಬಗ್ಗೆ ಬೇಡ. ನಾನೇನು ಹೇಳುತ್ತೇನೆ ಎಂದರೆ,...

ಶ್ರೀ ಎಂ.ಪಿ. ರೇಣುಕಾಚಾರ್ಯ :- ನೀವು ಚರ್ಚೆಯಲ್ಲೇ ಭಾಗವಹಿಸಲಿಲ್ಲ. ಏನು ಮಾಡುವುದು? ನಿಮ್ಮ ದುರಂತ ಅದು.

ಶ್ರೀ ಸಿದ್ದರಾಮಯ್ಯ :- ಹೀಗಾದರೆ ನಾವೇನು ಮಾತನಾಡುವುದಕ್ಕಾಗುತ್ತದೆ? ಈಗ ನಿಮ್ಮ ಈ 'Budget at a glance' change ಆಗುವುದಿಲ್ಲವೇ? ನಿಮ್ಮ surplus budget ನಲ್ಲಿ ಕೊಟ್ಟಿದ್ದ ಅಂಕಿ ಅಂಶಗಳಲ್ಲಿನ 73 ಕೋಟಿ ರೂ.ಗಳಲ್ಲಿ ಹೆಚ್ಚು ಕಡಿಮೆ ಆಗುವುದಿಲ್ಲವೇ? ಬಜೆಟ್ ಮಂಡಿಸಿದ ಮೇಲೆ, ನೀವು ಇಲ್ಲಿ ಚರ್ಚೆಯಾಗುವುದಕ್ಕೆ ಅವಕಾಶ ಕೊಡದೆ, ನೀವು announce ಮಾಡಿಬಿಟ್ಟಿರಲ್ಲಾ? Does it not amount to breach of Privilege? ನೀವೇನು ಕಾರ್ಯಕ್ರಮಗಳನ್ನು ಇಲ್ಲಿ ಹೇಳಿದ್ದೀರಿ, ಅವು ಸಾಧುವೋ? ಒಳ್ಳೆಯವೋ? ಅವುಗಳಿಂದ ರಾಜ್ಯಕ್ಕೆ ಅನುಕೂಲವೋ, ಇಲ್ಲವೋ ಎಂಬ ಬಗ್ಗೆ ಇಲ್ಲಿ ಚರ್ಚೆಯಾಯಿತೇ? Assuming for the argument sake, ನೀವು ಒಳ್ಳೆಯದನ್ನೇ ಹೇಳಿದ್ದೀರಿ ಎಂದಿಟ್ಟುಕೊಳ್ಳೋಣ. ನಿಮ್ಮ ದೃಷ್ಟಿಯಲ್ಲಿ, ರಾಜ್ಯದ ಹಿತದೃಷ್ಟಿಯಿಂದ ನೀವು ಹೇಳಿರುವುದೆಲ್ಲಾ ಒಳ್ಳೆಯದಕ್ಕೇ ಎಂದಿಟ್ಟುಕೊಳ್ಳೋಣ. Should they not be discussed here?

ಶ್ರೀ ಬಿ.ಎಸ್. ಯಡಿಯೂರಪ್ಪ :- ನೀವು ಅವತ್ತು ಉತ್ತರ ಹೇಳುವಾಗ ಅವುಗಳನ್ನು ಹೇಳಿದ್ದಿರಿ. ನಾವು ಮಾಡಿದ ಡಿಸ್ಕಷನ್ ಎಲ್ಲಾ ಮುಗಿದ ಮೇಲೆ, ಅವರು reply ಕೊಡುವಾಗ announce ಮಾಡಿದ್ದರೆ ಹೊರತು, ಅದಕ್ಕೆ ಮೊದಲೇ ಎಲ್ಲಿ ಅವುಗಳ ಬಗ್ಗೆ ಅವರು ಇಲ್ಲಿ announce ಮಾಡಿದ್ದರು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- .... ಬಂಜಾರ ಸಮಾಜಕ್ಕೆ 10 ಕೋಟಿ ರೂ.ಗಳನ್ನು ಕೊಟ್ಟಿದ್ದೇನೆ....

ಶ್ರೀ ಸಿದ್ದರಾಮಯ್ಯ :- ಆಯಿತು ಕೊಡಿ. ಬೇರೆಯವರ ದುಡ್ಡು ಯಾರೂ ಕೊಡುವುದಕ್ಕಾಗುವುದಿಲ್ಲ. ಜನರ ದುಡ್ಡು ಕೊಟ್ಟಿದ್ದೀರಿ, ಸಂತೋಷ. ನೀವು ಅವುಗಳನ್ನು ಯಾವಾಗ announce ಮಾಡಿದಿರಿ? While he was replying. ನಾವೆಲ್ಲಾ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಅದನ್ನು ಮಾಡಿದ್ದಿರಾ? ಅವುಗಳ ಬಗ್ಗೆ ನಮಗೆ ಚರ್ಚೆ ಮಾಡಲಿಕ್ಕೆ ಅವಕಾಶವಿತ್ತೇ? There was no opportunity for us to discuss, to give our suggestions or opinion. ನಿಮ್ಮಷ್ಟಕ್ಕೇ ನೀವೇ ಘೋಷಣೆ ಮಾಡಿಕೊಂಡರೆ ಹೇಗೆ?.....

ಶ್ರೀ ಜಗದೀಶ್ ಶೆಟ್ಟರ್ :- ಆ ರೀತಿ ಘೋಷಣೆ ಮಾಡಿದ ಮೇಲೆ, ಸ್ಪಷ್ಟೀಕರಣ ಎಂಬುದು ಇರುತ್ತದೆ. ಆಗ ನೀವು ಅದರ ಬಗ್ಗೆ ಕೇಳಬಹುದಾಗಿತ್ತು....

(ಗೊಂದಲ)

ಶ್ರೀ ಸಿದ್ದರಾಮಯ್ಯ :- ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಸ್ಪಷ್ಟೀಕರಣ ಬೇರೆ, discussion ಬೇರೆ.....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- .... ನೀವು ಅವುಗಳ ಬಗ್ಗೆ ಆಗಲೇ question ಮಾಡಬಹುದಾಗಿತ್ತು. ನೀವು ಅದರ ಬಗ್ಗೆ ಈಗ Privilege ತರುವ ಅಗತ್ಯವಿರಲಿಲ್ಲ. ವೆಲ್‌ಗೆ ಬರುವುದರ ಬದಲು ನೀವು ಅವತ್ತೇ ಅವುಗಳ ಬಗ್ಗೆ ಕೇಳಬಹುದಾಗಿತ್ತು.....

(ಗೊಂದಲ)

ಶ್ರೀ ಸಿದ್ದರಾಮಯ್ಯ :- Mr. Jagadish Shettar, ನೀವು Leader of the Opposition ಆಗಿ ಕೆಲಸ ಮಾಡಿದ್ದೀರಿ. ನಾವು 'ನಿಮ್ಮ ಉತ್ತರ ಸರಿಯಿಲ್ಲ' ಎಂದೆವು. ಆಗ ನೀವು ಇದನ್ನು announce ಮಾಡಿದಿರಿ. ಯಾವಾಗ ನೀವು ಇವುಗಳನ್ನು ಇಲ್ಲಿ ಚರ್ಚೆ ಮಾಡದೆ announce ಮಾಡಿದರೋ, ಆಗ ನಾವು ವೆಲ್‌ಗೆ ಬಂದೆವು. It amounts to Privilege...

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :-... ನೀವು ವೆಲ್‌ಗೆ ಬಂದಿರಿ. ಅವತ್ತು ನೀವು ಅದರ ಬಗ್ಗೆ ಕೇಳುವುದಕ್ಕೆ ನಿಮಗೆ ಹಕ್ಕಿತ್ತು. ಅವತ್ತು ನೀವು ಕೇಳಲಿಲ್ಲ....

(ಗೊಂದಲ)

ಶ್ರೀ ಸಿದ್ದರಾಮಯ್ಯ :- Yes, ಅವತ್ತು ನಾವು ಕೇಳಲಿಲ್ಲ ನಿಜ. I will meet your point. Please sit down.

(ಗೊಂದಲ)

ಶ್ರೀ ಜಗದೀಶರ್ ಶೆಟ್ಟರ್ :- .... ವಿಧಾನ ಪರಿಷತ್ತಿನಲ್ಲಿ announcement ಆಯಿತು....

(ಗೊಂದಲ)

ಶ್ರೀ ಸಿದ್ದರಾಮಯ್ಯ :- ಮಾನ್ಯ ಜಗದೀಶ್ ಶೆಟ್ಟರ್‌ರವರೆ, ದಯವಿಟ್ಟು ಕುಳಿತುಕೊಳ್ಳಿ. ನಾವು ಇಲ್ಲಿ ವೆಲ್‌ಗೆ ಬಂದೆವು ಎಂದು ಹೇಳುತ್ತೀರಿ. ಅಲ್ಲಿಗೆ ಹೋಗಿ 17 ಕೋಟಿ ರೂ.ಗಳದ್ದು announce ಮಾಡಿದಿರಿ. ಅದನ್ನು ನೀವು ಹೇಗೆ ಮಾಡಿದಿರಿ? ಅದನ್ನು ನೀವು ಇಲ್ಲೇ ಮಾಡಿದ್ದಿರಾ?

ಶ್ರೀ ಬಿ.ಎಸ್. ಯಡಿಯೂರಪ್ಪ :- ಅದರ ಬಗ್ಗೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ :- ಅದರ ಬಗ್ಗೆ ನೀವು ಉತ್ತರ ಕೊಡುತ್ತೀರಿ. ನಾನು ನೀವು ಉತ್ತರ ಕೊಡುವುದಿಲ್ಲ ಎಂದು ಹೇಳಲಿಲ್ಲ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :- Privilege ಬಗ್ಗೆ ನೀವು ಸ್ಪಷ್ಟವಾಗಿ ಹೇಳಿ. ಕೆಳಗಿನ ಮನೆಯಲ್ಲಿ ಚರ್ಚೆಯಾದ ನಂತರ ಒಪ್ಪಿಗೆ ಪಡೆದಿರಿ. ಇಲ್ಲಿ 203 ಕೋಟಿ ರೂ.ಗಳ ಬಗ್ಗೆ announce ಮಾಡಿದಿರಿ. ವಿಧಾನ ಪರಿಷತ್ತಿನಲ್ಲಿ ಮತ್ತೆ 17 ಕೋಟಿ ರೂ.ಗಳ ಯೋಜನೆ announce ಮಾಡಿದಿರಿ. That is a breach of Privilege. ಈ ಮನೆಯ ಸದಸ್ಯರ ಹಕ್ಕುಚ್ಯುತಿ ಆಗಿದೆ. ಬಿಜೆಪಿ ಸಮಾವೇಶದಲ್ಲಿ ಅದಕ್ಕೆ ಉತ್ತರ ಕೊಡುವುದಲ್ಲ. ಇಲ್ಲಿ ಅದಕ್ಕೇನು ಉತ್ತರ ಕೊಡುತ್ತೀರೋ ಹೇಳಿ. ನೀವು ಮೇಲ್ಮನೆಯಲ್ಲಿ 17 ಕೋಟಿ ರೂ.ಗಳ announce ಮಾಡಿದ್ದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ನಮಗೆ rights ಇದೆ. ಇದರಿಂದ ನಮ್ಮ ಹಕ್ಕುಚ್ಯುತಿಯಾಗಿದೆ ಎಂದು ನಾವು ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೆ, ತಾವೂ ಕೂಡ ನಮ್ಮ ರಕ್ಷಣೆಗೆ ಬರಬೇಕು. ನಿಮ್ಮದೂ ಕೂಡ ಆಗಿದೆ. ಮಾನ್ಯ ಪ್ರಕಾಶ್‌ರವರೆ, ನೀವು ಎಲ್ಲದಕ್ಕೂ ನಿಯಮ ಹೇಳುತ್ತೀರಿ. ಇದನ್ನು ಯಾವ ನಿಯಮಾವಳಿ ಪ್ರಕಾರ announce ಮಾಡಲಿಕ್ಕೆ ಬರುತ್ತದೆ ಎಂಬುದನ್ನು ತಾವೇ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅವರದೂ ಕೂಡ breach of Privilege ಆಗಿದೆ. ಮಾನ್ಯ ಮುಖ್ಯಮಂತ್ರಿಗಳ, ಮಾನ್ಯ ಪ್ರಕಾಶ್‌ರವರು ಮತ್ತು ಮಾನ್ಯ ರೇವಣ್ಣನವರು ಏಕೆ ಸುಮ್ಮನಿದ್ದಾರೆ ಎಂದರೆ, ಅವರದೂ ಕೂಡ breach

of Privilege ಆಗಿದೆ. ಪಾಪ ಅವರ ನೋಟಿಸ್‌ಗೆ ಇಲ್ಲ, ಕ್ಯಾಬಿನೆಟ್ ಇಲ್ಲ, ಏನೂ ಇಲ್ಲ...

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ನಾನು ನಿಮ್ಮಲ್ಲಿ ವಿಶೇಷ ಅನುಮತಿಯನ್ನು ಕೇಳುತ್ತೇನೆ, ನಿಮ್ಮಲ್ಲಿ ನನ್ನ ವಿಶೇಷ ರಿಕ್ವೆಸ್ಟ್ ಏನೆಂದರೆ, ನಾನೇನು ಕಾರ್ಯಕ್ರಮಗಳನ್ನು ಘೋಷಣೆ ಮಾಡಿದೆ, ಅದು ಅವರಿಗೆ ಸಮಾಧಾನವಾಗಲಿಲ್ಲ ಅದಕ್ಕೆ ವೆಲ್‌ಗೆ ಬಂದರು, ನಾನು ಅದನ್ನು ಪ್ರಶ್ನೆ ಮಾಡುವುದಿಲ್ಲ. ಈಗಲಾದರು ಸಹ ಲೈವ್ ಟೆಲಿಕಾಸ್ಟ್ ಮಾಡಿಸಿ, ನಾನು ಏನೇನು ಕಾರ್ಯಕ್ರಮವನ್ನು ಘೋಷಣೆ ಮಾಡಿದ್ದೇನೆ, ಯಾವುದು ಸರಿ ಯಾವುದು ತಪ್ಪು, ಯಾವುದನ್ನು ವಿರೋಧ ಮಾಡುತ್ತಾರೆ, ಹಕ್ಕುಚ್ಯುತಿಯ ಬಗ್ಗೆ ನಾನೇನು ಉತ್ತರವನ್ನು ಕೊಡುತ್ತೇನೆ ಎಲ್ಲವು ರಾಜ್ಯದ ಜನತೆಗೆ ಗೊತ್ತಾಗಲಿ ಸರ್. ಇದೊಂದು ವಿಶೇಷ ಸಂದರ್ಭ, ನಮ್ಮ ರಾಜ್ಯದ ಇತಿಹಾಸದಲ್ಲಿ, ಹಕ್ಕುಚ್ಯುತಿಯನ್ನು ಮೊದಲ ಬಾರಿಗೆ, ಬಜೆಟ್‌ನಲ್ಲಿ ಅಡಿಷನಲ್ ಆಗಿ ಅನೌನ್ಸ್ ಮಾಡಿದಾಗ ತರುತ್ತಿರುವುದು.

ಶ್ರೀ ಸಿದ್ದರಾಮಯ್ಯ :- ಹಕ್ಕುಚ್ಯುತಿ ಮಾಡಿದ್ದೀರಿ ಅದಕ್ಕೋಸ್ಕರ, ಮೊದಲನೆ ಬಾರಿಗೆ ಮಾಡಿದ್ದೀರಿ ಮೊದಲನೆ ಬಾರಿಗೆ ಇದನ್ನು ತಂದಿದ್ದಾರೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :- ಮೊಟ್ಟ ಮೊದಲನೆ ಬಾರಿಗೆ ತಾವು ವಯಲೇಟ್ ಮಾಡಿದ್ದಿರಿ, against the constitution, ಇವತ್ತು ನೀವು ಪಾಸ್ ಮಾಡಿ, ಹಕ್ಕುಚ್ಯುತಿಯಾಗುತ್ತದೆಂದರೆ ಏನು ಹೇಳುತ್ತಾರೆ? ಇದೇ ಹಕ್ಕುಚ್ಯುತಿಯಾಗಿದೆ.

ಶ್ರೀ ಸಿದ್ದರಾಮಯ್ಯ :- ಮಾನ್ಯ ಅಧ್ಯಕ್ಷರೆ, ಹಾಗೇನಾದರು ಇದ್ದಿದ್ದರೆ, ಬಜೆಟ್ ಆದ ಮೇಲೆ, ಬಜೆಟ್ ಮೇಲೆ ಡಿಸ್ಕಷನ್ ಆದ ಮೇಲೆ ಪ್ರೋಗ್ರಾಂಗಳನ್ನು ಅನೌನ್ಸ್ ಮಾಡಬೇಕೆನ್ನುದಾಗಿದ್ದರೆ ಅಲ್ಲಿ ಸಪ್ಲಿಮೆಂಟರಿ ಎಸ್ಟಿಮೆಟ್ಸ್‌ಗೆ ಅರ್ಟಿಕಲ್ 205 ಏತಕ್ಕೆ ಇಡುತ್ತಿದ್ದರು? 202ನಲ್ಲಿ ಯಾವ ಪ್ರಾವಿಷನ್ ಕೆಳಗಡೆ ಇದನ್ನು ನೀವು ಅನೌನ್ಸ್ ಮಾಡಿದಿರೆಂಬುದನ್ನು ಹೇಳುತ್ತೀರಾ? ಪ್ಲೀಸ್ ಹೇಳಿ, ನಾವು ಕೇಳುತ್ತೇವೆ ಹೇಳಿ, ಯಾವುದರಲ್ಲಿ ಮಾಡುತ್ತೀರೆಂಬುದನ್ನು ಈಗ ಹೇಳಿ? ಅದರಲ್ಲಿ ನೀವು 73 ಕೋಟಿ ಸರ್ಪ್ಲಸ್ ಎಂದು ಹೇಳಿದ್ದೀರಿ ಈಗ 200 ಕೋಟಿ ತೆಗೆದುಕೊಂಡು 220 ಕೋಟಿ ಲೆಕ್ಕಕ್ಕೆ ತೆಗೆದುಕೊಂಡರೆ ಏನಾಗುತ್ತದೆ? ಆಗ ಸರ್ಪ್ಲಸ್ ಎಷ್ಟಾಗುತ್ತದೆ? ಸರ್ಪ್ಲಸೊ ಅಥವಾ ಡಿಫಿಸಿಟೊ? ಇದನ್ನೆಲ್ಲಾ ಸದನದ ಗಮನಕ್ಕೆ ತರದೇ ಸದನಕ್ಕೆ

ತಿಳಿಸದೇ, ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡದೇ ಹೋದರೆ Does it not amount to breach of privilege? It is. ಅದಕ್ಕೆ ಅವರು ಇದನ್ನು ತಂದಿದ್ದಾರೆ. ಆದುದರಿಂದ ಮಾನ್ಯ ಅಧ್ಯಕ್ಷರೆ, ಇದಕ್ಕೆ ನೀವು ತೀರ್ಮಾನವನ್ನು ಕೊಡಬೇಕು, ಇದು ಸದನದ ಹಕ್ಕುಚ್ಯುತಿಯಾಗುತ್ತದೆ, ಸದಸ್ಯರ ಹಕ್ಕುಚ್ಯುತಿಯಾಗುತ್ತದೆ, ಅದಕ್ಕೋಸ್ಕರ ಇದನ್ನು ಹಕ್ಕುಚ್ಯುತಿಗೆ ಒಪ್ಪಿಸಬೇಕು ಮತ್ತೆ ಇದು ಹಕ್ಕುಚ್ಯುತಿಯಾಗಿದೆ ಎಂದು ಹೇಳಬೇಕು, ಇಷ್ಟನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :- ಸನ್ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಹಿರಿಯ ಸದಸ್ಯರಾದ ಮಾಜಿ ಮುಖ್ಯಮಂತ್ರಿಗಳು ಹಾಗೂ ವಿರೋಧಪಕ್ಷದ ನಾಯಕರಾದ ಧರ್ಮಸಿಂಗ್‌ರವರು, ಹಿರಿಯ ಅನುಭವಿ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು, ಹಣಕಾಸಿನ ಸಚಿವರಾಗಿ ಸಾಕಷ್ಟು ಅನುಭವವಿರುವ ಹಿರಿಯ ಸದಸ್ಯರಾದ ಸಿದ್ದರಾಮಯ್ಯನವರು ಹಕ್ಕುಚ್ಯುತಿಯ ಬಗ್ಗೆ ತಮ್ಮ ವಿಚಾರಗಳನ್ನು ಮಂಡನೆ ಮಾಡಿದ್ದಾರೆ. ಮತ್ತೆ ನಾನೇನು ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದೇನೆ, ಆ ಕಾರ್ಯಕ್ರಮ ಘೋಷಣೆ ಮಾಡಿದಾಗ ಇಲ್ಲಿ ಚರ್ಚೆಗೆ ಅವಕಾಶವಾಗಲಿಲ್ಲವೆಂದು ಹೇಳಿದ್ದಾರೆ ಅದಕ್ಕೆ ನಾನು ಜವಾಬ್ದಾರನಲ್ಲ. ಉತ್ತರ ಕೊಡುವ ಕಾಲದಲ್ಲಿ ಸಂಯಮದಿಂದ ನಾನೇನು ಈ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದೇನೆ ಅದನ್ನು ಕೇಳಿ, ಅದೇನಾದರೂ ಈ ನಾಡಿನ ಜನರಿಗೆ ಅನ್ಯಾಯವಾಗುವುದಾದರೆ ಅಥವಾ ಯಾರಾದರೂ ಕೆಲವರಿಗೆ ಸೀಮಿತವಾಗಿ ಅನುಕೂಲ ಮಾಡಿಕೊಡುವ ಯಾವುದಾದರೂ ಪ್ರಯತ್ನ ನಡೆದಿದ್ದರೆ ಆ ಬಗ್ಗೆ ಚರ್ಚೆ ಮಾಡುವುದಕ್ಕೆ ಈ ಮನೆಗೆ ಸಾರ್ವಭೌಮ ಅಧಿಕಾರವಿದೆ, ತಪ್ಪಾಗಿದ್ದರೆ ತಿದ್ದಿಕೊಳ್ಳುವುದಕ್ಕೆ ನಮಗೆ ನಿಮ್ಮ ಮಾರ್ಗದರ್ಶನ ಬೇಕಾಗಿದೆ.

ವಿವರಕ್ಕೆ ನಾನು ಹೋಗುವುದಿಲ್ಲ, ಎರಡು ಮೂರು ಸಂಗತಿಗಳನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ತಾವೇನು ದಿ: 4–4–2007ರ ಪತ್ರದಲ್ಲಿ ತಿಳಿಸಿರುವಂತೆ, ಅದೇನು ಅಂಕಿಅಂಶ ವ್ಯತ್ಯಾಸವಾಗಿದೆಯೋ ಏನೋ ಗೊತ್ತಿಲ್ಲ, 17,000 ಕೋಟಿಗಳ ಹೊಸ ಯೋಜನೆಗಳನ್ನು ಪ್ರಕಟಿಸಿದ್ದೇವೆಂದು ಹೇಳುತ್ತಾರೆ, ಇದು ಸತ್ಯಕ್ಕೆ ದೂರವಾದ ಸಂಗತಿ. ಈಗ 203 ಪ್ಲಸ್ 17 ಸೇರಿದರೆ 220 ಆಯಿತು ತಿದ್ದಿಕೊಳ್ಳೋಣ. ನಮ್ಮ ಹಿರಿಯ ಸದಸ್ಯರಿಗೆ ಒಂದು ಅಂಶವನ್ನು ನಾನು ಹೇಳುವಂತಹ ಅಗತ್ಯವಿಲ್ಲ. ಮುಂಗಡಪತ್ರದ ಮೇಲಿನ ಚರ್ಚೆಯ ನಂತರ ವಿಧಾನ ಸಭೆ ಯಾವ ಮೊತ್ತಕ್ಕೆ ಮತ ಹಾಕಿ ಅನುಮೋದಿಸಿದೆಯೋ ಆ ಮೊತ್ತಕ್ಕೆ ಸೀಮಿತವಾಗಿ ಕರ್ನಾಟಕ

ಧನವಿನಿಯೋಗ ಲೇಖಾನುದಾನ ವಿಧೇಯಕ 2007 ಅನ್ನು ಮಂಡಿಸಲಾಗಿದೆ. ಸದರಿ ವಿಧೇಯಕದಲ್ಲಿ ವಿಧಾನಸಭೆಯಲ್ಲಿ ಅಂಗೀಕಾರವಾದ ಸದರಿ ವಿಧೇಯಕ ಯಾವುದೇ ತಿದ್ದುಪಡಿಗಳಿಲ್ಲದೆ ವಿಧಾನ ಪರಿಷತ್ತಿನಲ್ಲಿ ತಿರಸ್ಕಾರವಾಗಿ ಮತ್ತೆ ವಿಧಾನಸಭೆಯಲ್ಲಿ ಎರಡನೆ ಬಾರಿಗೆ ಅಂಗೀಕಾರವಾಗಿದೆ.

ಮುಂಗಡ ಪತ್ರದ ಮೇಲೆ ನಡೆದ ಈ ಚರ್ಚೆಗೆ ಉತ್ತರಿಸುವ ಕಾಲದಲ್ಲಿ ಸದನದ ಗೌರವಾನ್ವಿತ ಕೆಲವು ಸದಸ್ಯರು ಪ್ರಸ್ತಾಪಿಸಿದ ಕೆಲವು ವಿಚಾರಗಳು, ನೀಡಿದ ಕೆಲವು ಸಲಹೆಗಳು, ಬಜೆಟ್ ಮಂಡನೆ ಮಾಡಿದ ಮೇಲೆ ಈ ನಾಡಿನ ಅನೇಕ ಹಿರಿಯರು, ನಾಡಿನ ಅಭಿವೃದ್ಧಿಯ ಬಗ್ಗೆ ಚಿಂತನೆ ಮಾಡುವ ಜನ ಕೊಟ್ಟಂತಹ ಸಲಹೆ, ನನ್ನ ಮಂತ್ರಿಮಂಡಲದ ಸದಸ್ಯರು ಕೊಟ್ಟಂತಹ ಸಲಹೆ, ನಮ್ಮ ಶಾಸಕರು ಕೊಟ್ಟಂತಹ ಸಲಹೆ, ಮುಖ್ಯಮಂತ್ರಿಗಳು ಕೊಟ್ಟಂತಹ ಸಲಹೆ, ಇವುಗಳ ಆಧಾರದ ಮೇಲೆ ಕೆಲವು ಕಾರ್ಯಕ್ರಮಗಳನ್ನು ನಾನು ಘೋಷಣೆ ಮಾಡಿದ್ದೇನೆ. ಈ ಹೊಸ ಯೋಜನೆಗಳು 2007–08ನೇ ಸಾಲಿನ ಕರ್ನಾಟಕ ಧನವಿನಿಯೋಗ 2007ರಲ್ಲಿ ಸೇರಿರುವುದಿಲ್ಲ, ಇದು ಸೇರಿಲ್ಲವೆಂದು ನಾನು ನೂರು ಬಾರಿ ಸ್ಪಷ್ಟ ಮಾಡುತ್ತೇನೆ. ವಾಡಿಕೆ ಏನೆಂದರೆ, ಹೊಸದಾಗಿ ಪ್ರಕಟಿಸಿರುವ ಯೋಜನೆಗಳನ್ನು ಪೂರಕ ಬಜೆಟ್‌ನಲ್ಲಿ ಮಂಡಿಸುವಾಗ ಹಣಕಾಸಿನ ಅವಕಾಶ ನೋಡಿಕೊಂಡು ಸದನದ ಅನುಮೋದನೆಯನ್ನು ಪಡೆಯುವುದು ವಾಡಿಕೆ. ಇದು ಈ ದೇಶದ ಸಂವಿಧಾನದ ಚೌಕಟ್ಟಿನಲ್ಲಿ ವಿಧಾನ ಸಭೆ ಇರಬಹುದು, ಲೋಕಸಭೆ ಇರಬಹುದು, ಇದು ನಡೆದುಕೊಂಡು ಬಂದಂತಹ ದಾರಿ. ತಾವು ಹಿರಿಯರೇನು ಮಾಡಿದ್ದೀರಿ ಅದನ್ನೇ ನಾನು ಪಾಲನೆ ಮಾಡಿದ್ದೇನೆ.

ಈ ರೀತಿ ಹೊಸ ಯೋಜನೆಗಳನ್ನು ಪ್ರಕಟಿಸಿರುವುದರಿಂದ ಯಾವುದೇ ಹಕ್ಕುಚ್ಯುತಿತಯಾಗಿರುವುದಿಲ್ಲ. ಭಾರತದ ಸಂವಿಧಾನದ 194ರ ಅನುಚ್ಛೇದದ ಅಡಿಯಲ್ಲಿ, ವಿಧಾನ ಮಂಡಲದ ಕೆಲವು ಹಕ್ಕುಬಾಧ್ಯತೆಗಳನ್ನು ನೀಡಲಾಗಿದೆ, ಇವುಗಳ ವ್ಯಾಪ್ತಿಯಲ್ಲಿ ಹಕ್ಕುಚ್ಯುತಿಯನ್ನು ನಮ್ಮ ಕಾಂಗ್ರೆಸ್ ಸ್ನೇಹಿತರೇನು ಹೇಳಿದ್ದಾರೆ, ಆ ವಿಷಯ ಈ ಒಂದು ಹಕ್ಕುಚ್ಯುತಿಗೆ ಸೇರುವುದಿಲ್ಲ. ವಿಧಾನ ಪರಿಷತ್ತಿನಲ್ಲಿ ಯಾವುದೇ ಹಣಕಾಸಿನ ವಿಧೇಯಕವನ್ನು ಮೊದಲು ಮಂಡಿಸಲು ಸಂವಿಧಾನದ ಪ್ರಕಾರ ಅವಕಾಶವಿಲ್ಲವೆಂಬುದು ನನಗೆ ಗೊತ್ತಿದೆ. ಆದರೆ ಪ್ರಸ್ತುತದ ಸನ್ನಿವೇಶದಲ್ಲಿ, ವಿಧಾನ ಸಭೆಯಲ್ಲಿ ಮಂಡಿಸಿದ ಕರ್ನಾಟಕ ಧನವಿನಿಯೋಗ ವಿಧೇಯಕ 2007, ವಿಧಾನ ಪರಿಷತ್ತಿನಲ್ಲಿ ಯಾವುದೇ ಮಾರ್ಪಾಡಿಲ್ಲದೇ ಹಿಂತಿರುಗಿಸಲ್ಪಟ್ಟಿದ್ದು, ಈಗಾಗಲೇ ನಾನು ಹೇಳಿದಂತೆ 2ನೇ ಬಾರಿಗೆ ವಿಧಾನ ಸಭೆಯಲ್ಲಿ ಅಂಗೀಕಾರವಾಗಿದೆ.

ಈ ವಿಷಯಗಳಿಗೆ ಸಂಬಂಧಿಸಿದಂತೆ M.N.Kaul and Shakdarರವರ Practice and Procedure of Parliament ಪುಟ 93 ರಲ್ಲಿ ಈ ಕೆಳಕಂಡಂತೆ ಹೇಳಿದ್ದಾರೆ. "If the appropriation accounts are laid on the table of the Legislative Council before they are so laid on the table of the Legislative Assembly, there is no breach of privilege though it would be more appropriate if they were first laid before Assembly withholds or grants, money to the Government. ಅಂದರೆ ವಿಧಾನಸಭೆಯಲ್ಲಿ ಮಂಡಿಸುವ ಮುನ್ನವೇ ಹಣಕಾಸಿನ ವಿಧೇಯಕವನ್ನು ಒಂದು ವೇಳೆ ಮಂಡಿಸಿದರೂ ಕೂಡ ಅದು ಅಸಂಮಜಸವಾಗುತ್ತದೆಯೇ ವಿನಃ ಹಕ್ಕುಚ್ಯುತಿಯಾಗಿರುವುದಿಲ್ಲ. ಪ್ರಸ್ತುತ ನಮ್ಮ ಕಾಂಗ್ರೆಸ್‌ನವರು ಎತ್ತಿರುವ ಪ್ರಶ್ನೆ ಈ ಹಿನ್ನೆಲೆಯಲ್ಲಿ ಪರಿಗಣಿಸಿದರೂ ಸಹ ಇದು ಹಕ್ಕುಚ್ಯುತಿ ಉದ್ಭವವಾಗುವುದಿಲ್ಲ. ಆದುದರಿಂದ ವಿಧಾನಸಭೆಯಲ್ಲಾಗಲೀ ವಿಧಾನ ಪರಿಷತ್ತಿನಲ್ಲಾಗಲೀ ಗೌರವಾನ್ವಿತ ಸದಸ್ಯರಿಗೆ ನಾನು ಯಾವುದೇ ಹಕ್ಕುಚ್ಯುತಿಯನ್ನು ಮಾಡಿಲ್ಲ.

ಈ ಸದರಿ ಪ್ರಕರಣಕ್ಕೆ ಅನ್ವಯಿಸದಿದ್ದರೂ ಸಹ ಬಜೆಟ್ ಮಂಡಿಸುವ ಸಂದರ್ಭದಲ್ಲಿ announcing increase in levies by the Government on the eve of the budget session has been held not to be a breach of privilege ಎಂದು M.N.Kaul and Shakdhar ರವರು Practice and Procedure of Parliament ಪುಟ 294 ರಲ್ಲಿ ಹೇಳಿರುವುದನ್ನು ಸದನದ ಗಮನಕ್ಕೆ ತರುತ್ತೇನೆ. ಲೆವಿ ಹೆಚ್ಚಳ ಮಾಡಿರುವ ಸಂದರ್ಭದಲ್ಲಿ ಅಧಿಸೂಚನೆಗಳ ಮೂಲಕ ಹೊಸ ಯೋಜನೆಗಳನ್ನು ಪ್ರಕಟಿಸುವ ಸಂದರ್ಭದಲ್ಲಿ, ಪೂರಕ ಬಜೆಟ್ ಮಂಡಿಸುವಾಗ ನಾನು ಈಗಾಗಲೇ ಹೇಳಿದಂತೆ ಸೂಕ್ತ ಹಣಕಾಸನ್ನು ಕಲ್ಪಿಸಿ ಸದನದ ಅನುಮೋದನೆಯನ್ನು ನಾನು ಪಡೆಯುತ್ತೇನೆ. ನಾನು ಒಂದೆರಡು ಸಂಗತಿಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಈ ಘೋಷಣೆಗಳನ್ನು ಯಾವುದೇ ಸಾರ್ವಜನಿಕ ಸಭೆಗಳಲ್ಲಿ ಪತ್ರಿಕಾ ಗೋಷ್ಠಿ ಮಾಡಿ, ಆ ಸಂದರ್ಶನದಲ್ಲಿ ನಾನು ಮಾಡಿಲ್ಲ. ಗೌರವಾನ್ವಿತ ಸದಸ್ಯರ ಮುಂದೆ ಇಲ್ಲಿ ನಾನು ಮಾಡಿದ್ದೇನೆ. ನಾನು ಈಗಾಗಲೇ ಹೇಳಿದಂತೆ, ಸಲಹೆ-ಸೂಚನೆಗಳನ್ವಯ ಈ ಘೋಷಣೆಯನ್ನು ಮಾಡಿದ್ದೇನೆ.

ಇನ್ನು ತಾವೇನು ಆರೋಪ ಮಾಡಿದ್ದೀರಾ, ಮುಖ್ಯಮಂತ್ರಿಗಳಿಗೆ ಏನು ಗೊತ್ತಿಲ್ಲ ಎಂಬುದರ ಬಗ್ಗೆ. ಮುಖ್ಯಮಂತ್ರಿಗಳ ಜೊತೆ ಪ್ರಮುಖವಾದ ಯಾವುದೇ ನಿರ್ಧಾರ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಸಮಾಲೋಚನೆ ಮಾಡಿಯೇ ಇಲ್ಲಿ ನಾನು ಘೋಷಣೆ ಮಾಡುತ್ತೇನೆ. ಆ ಜವಾಬ್ದಾರಿ ಅರಿವು ನನಗಿದೆ. ಎರಡನೆಯದು, ತಮ್ಮ ಮಾತಿನಲ್ಲಿ ಒಂದು ವಿಷಯ ಬಂತು, ಎಲ್ಲೊ ಒಂದು ಕಡೆ BJP-JDS ಗೆ ಪೈಪೋಟಿ, ಇಲ್ಲ. BJP-JDS ಕಳೆದ 14 ತಿಂಗಳಿನಲ್ಲಿ ಯಾವುದೇ ಪ್ರಮುಖ ನಿರ್ಧಾರ ತೆಗೆದುಕೊಳ್ಳಬೇಕಾದರೆ ಚರ್ಚೆ ಮಾಡಿ, ಒಂದೊಂದು ಸಣ್ಣ ಸಣ್ಣ ಕಾರ್ಯಕ್ರಮಗಳಿಗಲ್ಲ, ಮೇಜರ್ ಡಿಸಿಷನ್ ತೆಗೆದುಕೊಳ್ಳುವ ಕಾಲದಲ್ಲಿ ಚರ್ಚೆ ಮಾಡಿಯೇ ಮಾಡುತ್ತೇವೆ. ಉದಾ : ಸನ್ಮಾನ್ಯ ಮುಖ್ಯಮಂತ್ರಿಗಳು ಗಾಂಧಿ ಜಯಂತಿಯ ದಿವಸ ಸುವರ್ಣ ಕರ್ನಾಟಕದ ಕಾರ್ಯಕ್ರಮವನ್ನು ಘೋಷಣೆ ಮಾಡಿದರು. Supplementary budget ನಲ್ಲಿ ಆಯವ್ಯಯದಲ್ಲಿ ಅದಕ್ಕೆ ಹಣಕಾಸಿನ ನೆರವನ್ನು ತೆಗೆದು ನಾವು ಮಾಡಿದ್ದೇವೆ.

ನೀವೇ ಆ ಮನೆಯಲ್ಲಿ 50,000 ರೂಪಾಯಿಯವರೆಗೆ ಸಾಲ ಇರುವಂತಹ ರೈತರಿಗೆ 25,000 ರೂಪಾಯಿ ಸಾಲ ಮನ್ನಾ ಮಾಡುತ್ತೇವೆ, ಉಳಿದ 25,000 ರೂಪಾಯಿಗಳನ್ನು ಕಟ್ಟಬೇಕೆಂದು ಹೇಳಿದಾಗ, ಇಲ್ಲ ಯಡಿಯೂರಪ್ಪನವರೇ ಒಂದು ಲಕ್ಷದವರೆಗೆ ವಿಸ್ತರಣೆ ಮಾಡಿ ಎಂದು ನೀವೇ ನಮಗೆ ಒತ್ತಾಯ ಮಾಡಿದಿರಿ. ಅಥವಾ ನಾನು ಇಲ್ಲಿ ಮೊದಲನೇ 25,000 ರೂಪಾಯಿಯವರೆಗೆ ಸಾಲ ಮನ್ನಾ ಮಾಡುತ್ತೇನೆ ಎಂದು ಹೇಳುವುದಕ್ಕೆ ನನಗೆ ಅಧಿಕಾರ ಇದೆ ಎನ್ನುವುದಾದರೆ, ಈ 203 ಕೋಟಿ ಅಥವಾ ಅಲ್ಲಿ ಘೋಷಣೆ ಮಾಡಿದಂತಹ 17 ಕೋಟಿ ರೂಪಾಯಿಗಳು ಅನೌನ್ಸ್ ಮಾಡುವುದಕ್ಕೆ ಏಕೆ ಅಡ್ಡಿ ಆತಂಕಗಳು ಬರುತ್ತವೆ ಎಂದು ನನಗೆ ಅರ್ಥವಾಗುತ್ತಿಲ್ಲ. ತಾವು ಹೇಳಿದ್ದೀರಿ, ಯಡಿಯೂರಪ್ಪನವರೇ ಈ ಹಣ ಕೇಂದ್ರ ಸರ್ಕಾರದಿಂದ ಬಂದಿತು. ಅದಕ್ಕೋಸ್ಕರ ಅಂಕಿಅಂಶಗಳನ್ನು ಹೇಳಿ ನಾನು ಇಷ್ಟು ದೊಡ್ಡ ಸಾಧನೆ ಮಾಡಿದ್ದೇನೆ ಎಂದು ನಾನೇನು ಬೆನ್ನು ತಟ್ಟಿಕೊಂಡಿಲ್ಲ. ಮಾಡಬೇಕಾದ್ದು ಬಹಳ ಇದೆ. ಮಾಡಿರುವ ಒಳ್ಳೆಯ ಕೆಲಸಗಳನ್ನು ಹೇಳಬೇಕಾಗುತ್ತದೆ. 2005–06ರಲ್ಲಿ Commercial tax, State Excise, Motor Vehicle tax, Stamps and Registration Fees, Land revenue ಇದರಿಂದ 18,314,68 ಲಕ್ಷ ರೂಪಾಯಿಗಳು ಸಂಗ್ರಹ ಆಗಿವೆ. ನಾವು 2006–07ರಲ್ಲಿ ಈ ಐದು ಪ್ರಮುಖ ಇಲಾಖೆಗಳಲ್ಲಿ 23,626,67 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿದ್ದೇನೆ.

ಶ್ರೀ ಸಿದ್ದರಾಮಯ್ಯ :- Revised estimates 19,000 ಚಿಲ್ಲರೆ ಕೋಟಿ ಇತ್ತು. 2006--07ರ ಬಜೆಟ್ ಪುಸ್ತಕ ನೋಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಯಾವುದೇ ಅಂಕಿ ಅಂಶಗಳನ್ನು ಮುಚ್ಚಿಡುವುದಕ್ಕಾಗುವುದಿಲ್ಲ. ಈ ಐದು ಇಲಾಖೆಗಳಲ್ಲಿ ಹೋದ ವರ್ಷಕ್ಕೆ ಹೋಲಿಸಿದರೆ ಈ ವರ್ಷ 5,311 ಕೋಟಿ 99 ಲಕ್ಷಕ್ಕಿಂತ ಹೆಚ್ಚು ಸಂಗ್ರಹ ಆಗಿದೆ. ಇದನ್ನು ಅಂಕಿ ಅಂಶಗಳು ಹೇಳುತ್ತವೆ. ಅದೇ ರೀತಿ 2005–06ನೇ ಸಾಲಿನಲ್ಲಿ 18,314.68 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿದ್ದರೆ, 2004–05ರಲ್ಲಿ ಸಂಗ್ರಹವಾಗಿದ್ದು, 15,723 ಕೋಟಿ ಐದು ಲಕ್ಷ ರೂಪಾಯಿಗಳು. ಅಂದರೆ 2005–06ರಲ್ಲಿ ಹೆಚ್ಚುವರಿಯಾಗಿ ಸಂಗ್ರಹ ಮಾಡಿರುವುದು, 2591 ಕೋಟಿ 63 ಲಕ್ಷ ರೂಪಾಯಿಗಳು. ಅದಕ್ಕೆ ಹೋಲಿಕೆ ಮಾಡಿದರೆ, 5311 ಎಂದರೆ, almost double. ಅದಕ್ಕಿಂತ ಹೆಚ್ಚು ಸೋರಿಕೆಯನ್ನು ತಡೆದು, ನನ್ನ ಬೊಕ್ಕಸಕ್ಕೆ ಹಣ ತಂದಿದ್ದಾರೆ ಎಂದು ಹೇಳಿ ನಾಡಿನ ಜನರಿಗೆ ಮನವರಿಕೆ ಮಾಡುವುದು, ಈ ಸದನದ ಗಮನಕ್ಕೆ ತರುವುದು ನನ್ನ ಕರ್ತವ್ಯವೆಂದು ನಾನು ಭಾವಿಸಿದ್ದೇನೆ.

2004–05ರಲ್ಲಿ 15,723 ಕೋಟಿ ರೂಪಾಯಿಗಳು ಸಂಗ್ರಹವಾಗಿದ್ದವು. ಅಂದರೆ 3,427 ಕೋಟಿ ರೂಪಾಯಿಗಳನ್ನು ಹೆಚ್ಚು ಸಂಗ್ರಹ ಮಾಡಿದ್ದೀರಿ ನಿಮ್ಮ ಕಾಲದಲ್ಲಿ. ಕಳೆದ ಮೂರು – ನಾಲ್ಕು ವರ್ಷಗಳಿಗೆ ಹೋಲಿಸಿದರೆ, ತೆರಿಗೆ ಜಾಸ್ತಿ ಹಾಕದೆ, major tax ಬರುವಂತಹ ಈ ಐದು ಪ್ರಮುಖ ಇಲಾಖೆಗಳಲ್ಲಿ ಒಂದು ದಾಖಲೆಯ ಹೆಚ್ಚುವರಿ ಸಂಗ್ರಹ 5311 ಕೋಟಿ ರೂಪಾಯಿಗಳಷ್ಟು ಮಾಡಿದ್ದೇವೆಂದು ಈ ರಾಜ್ಯದ ಜನರ ಮುಂದೆ, ಈ ಮನೆಯ ಮುಂದೆ ಹೇಳುವುದಕ್ಕೆ ನನಗೆ ಯಾವುದೇ ಅಡ್ಡಿ ಆತಂಕಗಳು ಇವೆ ಎಂದು ನನಗನ್ನಿಸುವುದಿಲ್ಲ. ಎರಡನೆಯದು, ಸನ್ಮಾನ್ಯ ಅಧ್ಯಕ್ಷರೆ, ಬಜೆಟ್ ಬಗ್ಗೆ ವ್ಯಾಪಕವಾದ ಚರ್ಚೆ ಮಾಡೋಣ. ಇವತ್ತು ಯಾವುದೇ ವ್ಯಕ್ತಿ ಯಾವುದೇ ರೀತಿಯ ಕ್ರಾಂತಿಕಾರಿಯಾದ ಬದಲಾವಣೆ ಮಾಡುವುದಕ್ಕೆ ಹೆಜ್ಜೆಯನ್ನು ಇಟ್ಟಾಗ ನಿಂದನೆ, ಈ ರೀತಿಯ ಅಪಾದನೆಗಳನ್ನು ಕೇಳಲೇಬೇಕಾಗುತ್ತದೆ.

ಶ್ರೀ ಎನ್. ಧರ್ಮಸಿಂಗ್ :- ಜಾತಿ ಆಧಾರದ ಮೇಲೆ ಹಣ ಕೊಟ್ಟರೆ ಕ್ರಾಂತಿಕಾರಿ ಬದಲಾವಣೆಯಾ? ರಾಜ್ಯದ ಬಡವರಿಗೆ ಹಣ ಕೊಡಿ. ಅಭಿವೃದ್ಧಿ ಕೆಲಸಗಳಿಗಾಗಿ ಹಣ ಕೊಡಿ. ಘೋಷಣೆಗಳ ಮುಖಾಂತರ ಹಣ ಕೊಡಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಕಳೆದ 20 ವರ್ಷಗಳಿಂದ ಬಂಜಾರ ಸಮಾಜದವರು ಸತತವಾಗಿ ಹೋರಾಟ ಮಾಡುತ್ತಿದ್ದರು. ನಮಗೆ ಒಂದು ನಿಗಮ ಮಾಡಿ ಎಂದು ಹೇಳಿದರು. 10 ಕೋಟಿ ರೂಪಾಯಿಗಳನ್ನು ಅವರಿಗಾಗಿ ಇಟ್ಟಿದ್ದೇವೆ.

ಶ್ರೀ ಎನ್. ಧರ್ಮಸಿಂಗ್ :– ಎಲ್ಲಾ ಬಂಜಾರ ಗುಡಿಸಲುಗಳನ್ನು ಭಸ್ಮ ಮಾಡುವುದಕ್ಕೆ ಹೊರಟಿದ್ದಾರೆ. ಬಿಲ್ ತಂದಿದ್ದಾರೆ, ಈಗ ಹಣ ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ತಾವು ಏಕೆ ಆ ರೀತಿ ಆವೇಶಕ್ಕೆ ಒಳಗಾಗುತ್ತೀರಿ ಗೊತ್ತಿಲ್ಲ. ಬಂಜಾರ ಅಭಿವೃದ್ಧಿ ನಿಗಮ ಆಗಬೇಕೆಂದು ಬಹಳ ವರ್ಷಗಳಿಂದ ಬೇಡಿಕೆ ಇತ್ತು. 10 ಕೋಟಿ ರೂಪಾಯಿಗಳನ್ನು ನಾನು ತೆಗೆದು ಇಟ್ಟಿದ್ದೇನೆ. ಇವತ್ತು ಈ ಮನೆಗೆ ಭರವಸೆ ಕೊಡುತ್ತೇನೆ, ಸಂಪನ್ಮೂಲಗಳನ್ನು ಸಂಗ್ರಹಿಸಿ ಇನ್ನು 15 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಡುತ್ತೇನೆ. 25 ಕೋಟಿ ರೂಪಾಯಿಗಳನ್ನು ನಾನು ಬಂಜಾರ ಸಮಾಜಕ್ಕೆ ಕೊಡುವವನಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೆ, ಇನ್ನೊಂದು ಸಾರಿ ತಾವು ವಿಮರ್ಶೆ ಮಾಡಿ. They are Scheduled caste. ತಾವು ಈಗ internal reservation ನ್ನು ಒಪ್ಪಿಕೊಂಡ ಹಾಗಾಗುತ್ತದೆ. It is not allowed in Constitution. ತಾವು ಸ್ವಲ್ಪ ಯೋಚನೆ ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ಅದೇ ಮಾತಿಗೆ ನಾನು ಬೆಂಬಲಿಸುತ್ತಾ, ಈ ಸದನದಲ್ಲಿ ನಾವು ಮಾತನಾಡಿದರೆ, ಇಂತಹ ಜಾತಿ ವಿರುದ್ಧ, ಇಂತಹ ಜಾತಿ ಪರ ಎನ್ನತಕ್ಕಂತಹ ಮಾತು ಬರುತ್ತದೆ. ನಿಜವಾಗಿಯೂ ಎಲ್ಲರೂ ಸಂಕೋಚ ಪಡುತ್ತಾರೆ. ಇದೇನು ಅವರು ಕೊಟ್ಟಿದ್ದಾರೆ, ಇವರು ವಿರೋಧ ಮಾಡುತ್ತಾರೆಂದು ಹೇಳುತ್ತಾರೆ. ಆದರೆ ತಾವು ಕೊಡತಕ್ಕಂತಹವರು ಯೋಚನೆ ಮಾಡಬೇಕು. Scheduled castes list ನಲ್ಲಿ ಇಡೀ ದೇಶದಲ್ಲಿ ಯಾರೂ ತಂದಿಲ್ಲ. ಕರ್ನಾಟಕ ರಾಜ್ಯದಲ್ಲಿ area restriction removal ಮಾಡಿ ಮಾನ್ಯ ದೇವರಾಜ ಅರಸುರವರ ಕಾಲದಲ್ಲಿ ಸೇರಿಸಿದರು. ಅಸ್ಪೃಶ್ಯರಿಗೆ ಏನು ಸವಲತ್ತುಗಳು ಸಿಗುತ್ತವೆ, ಎಲ್ಲಾ ಸವಲತ್ತುಗಳನ್ನು ಅವರಿಗೂ ಕೂಡ ಕೊಡಬೇಕೆಂದು ಹೇಳಿ, ಈ ದೇಶದಲ್ಲಿ ಮಾಡಿದ್ದು. 110 ಕಮ್ಯುನಿಟಿ ಜೊತೆಯಲ್ಲಿ ಅವರೂ ಕೂಡ ಇದ್ದಾರೆ. ಯಾವ ಉದ್ದೇಶವೋ, ಯಾವ intention ನೋ ನನಗೆ ಗೊತ್ತಿಲ್ಲ. ನೀವು ಬೇಕಾದರೆ Scheduled Caste ನವರಿಗೆ ಸಾವಿರ ಕೋಟಿ ರೂಪಾಯಿಗಳನ್ನು ಇಡಿ. ಇಟ್ಟು ಒಂದು programme ಹಾಕಿ. ಅಡ್ಡಿ ಇಲ್ಲ. ಆದರೆ division ಮಾಡಿ ಹೋಳು ಮಾಡಿ, ಒಡಕು ಮಾಡಿ, ಆಳತಕ್ಕಂತಹ ಪ್ರವೃತ್ತಿಯನ್ನು ಬೆಳೆಸಬೇಡಿ. ಅದು ರಾಜ್ಯಕ್ಕೂ

ಚೆನ್ನಾಗಿ ಆಗುವುದಿಲ್ಲ, ದೇಶಕ್ಕೂ ಚೆನ್ನಾಗಿ ಆಗುವುದಿಲ್ಲ. ನಾಳೆ ಈ ಬಡ ವರ್ಗದಲ್ಲಿ ನೀವು ಭಿನ್ನಾಭಿಪ್ರಾಯಗಳನ್ನು ಹುಟ್ಟಿಸಿ ಒಂದು ದೊಡ್ಡ ಅನಾಹುತವಾಗುತ್ತದೆ ಎನ್ನತಕ್ಕಂತಹ ಮಾತು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇಲ್ಲದಿದ್ದರೆ ಒಂದು ಸಮಾಜದ ಮೇಲೆ ಇನ್ನೊಂದು ಸಮಾಜಕ್ಕೆ ಎತ್ತಿ ಕಟ್ಟುವುದು, ಅವರಿಗೆ ಇನ್ನೊಂದು ಹೇಳುವುದು, ಇಂತಹವು ನಡೆಯುತ್ತವೆ. ನೀವು ಏನೇ ಕಾರ್ಯಕ್ರಮ ತಂದರೂ ಕೂಡ ಸರ್ವಾಂಗೀಣ ಅಭಿವೃದ್ಧಿಗಾಗಿ ತನ್ನಿ. ಅವರು part and parcel of Scheduled Caste-Scheduled tribe list.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅವರ ಅನುಭವದ ಹಿನ್ನೆಲೆಯಲ್ಲಿ ಏನು ಹೇಳಿದ್ದಾರೆ, ಇದಕ್ಕೆ ನಾನು ನೂರಕ್ಕೆ ನೂರು ಒಪ್ಪುತ್ತೇನೆ. ಆದರೆ ಪರಿಶಿಷ್ಟ ಜನಾಂಗದಲ್ಲಿ left-right ವ್ಯತ್ಯಾಸಗಳು ಕಾಣುತ್ತಿವೆ. ಅವರ ಮನಸ್ಸಿನಲ್ಲಿ ನಮ್ಮ ಜನರಿಗೆ ಯಾವ ರೀತಿಯ ಸವಲತ್ತುಗಳು ಸಿಗಬೇಕಾಗಿತ್ತೋ ಅದು ಸಿಗಲಿಲ್ಲವೆನ್ನುವ ಆಕ್ರೋಶದಿಂದ ಹೋರಾಟ ಈ ರಾಜ್ಯದಲ್ಲಿ ನಡೆಯುತ್ತಿದೆ. ಅದರ ಬಗ್ಗೆ study ಮಾಡಿ ವರದಿ ಕೊಡುವುದಕ್ಕೋಸ್ಕರ ನಾವು ಒಂದು ಕಮಿಟಿ ಮಾಡಿದ್ದೇವೆ.

ಶ್ರೀ ಎನ್. ಧರ್ಮಸಿಂಗ್ :– ನೀವು ಮಾಡಿಲ್ಲ ನಾವು ಮಾಡಿದ್ದು. ನಮ್ಮ ಸರ್ಕಾರ ಮಾಡಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಏಕೆ ಮಾಡಿದಿರಿ? ಅವರು ಏಕೆ ಹೊಡೆದಾಡುವ ಕೆಲಸ ಮಾಡಿದಿರಿ? ನೀವು ಅದನ್ನು ಏಕೆ ಮಾಡಿದಿರಿ ಹೇಳಿ. ಅವರಿಗೆ ನ್ಯಾಯ ಸಿಕ್ಕಿದ್ದರೆ, ಪರಿಶಿಷ್ಟ ಜಾತಿಯವರ ಬಗ್ಗೆ ಒಳ್ಳೆಯ ಭಾವನೆ ಇದ್ದರೆ, ಆಯೋಗವನ್ನು ರಚನೆ ಮಾಡುವ ಪ್ರಶ್ನೆ ಬರುತ್ತಿರಲಿಲ್ಲ. ನನ್ನ ಪಾಯಿಂಟೂ ಅದೆ. ನಿಮ್ಮ ಮಾತು ಒಪ್ಪುತ್ತೇನೆ.

ಶ್ರೀ ಎನ್. ಧರ್ಮಸಿಂಗ್ :– BJP ಯವರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಬಡವರ ಬಗ್ಗೆ ಕಳಕಳಿ ಇಲ್ಲ. ಅವರ ಬಗ್ಗೆ ಭಾವನೆಗಳೇ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ :– ನೀವು SC:ST ಹೆಸರು ಹೇಳಿಕೊಂಡು ಏನು ಮಾಡಿದ್ದೀರಿ ಎಂದು ಗೊತ್ತಿದೆ.

ಅಧ್ಯಕ್ಷರು :- ದಯಮಾಡಿ ಕುಳಿತುಕೊಳ್ಳಿ. ಅವರು ನಾನು ಈಲ್ಡ್ ಆಗಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜ್ :- ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಯಾವ ಪಕ್ಷದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಗೆದ್ದಿದ್ದಾರೆಂದು ಅವರು ಅಂಕಿ ಅಂಶಗಳನ್ನು ತೆಗೆದುಕೊಳ್ಳಲಿ. ದಾಖಲೆ ತರಿಸಿ ನೋಡಲಿ. ಆಗ ಗೊತ್ತಾಗುತ್ತದೆ. BJP ಯಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಗೆದ್ದು ಬಂದಿದ್ದಾರೆ ಎಂದು. ಈ ಜನತೆ ಇವತ್ತು ಅಷ್ಟು ಬಹುಮತ ಕೊಟ್ಟು ಗೆಲ್ಲಿಸಿದರು. ಅದನ್ನು ತಿಳಿದುಕೊಳ್ಳುವಂತಹ ಪ್ರಯತ್ನವನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ದಯಮಾಡಿ ಇದನ್ನು ರಾಜಕಾರಣ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಲ್ಲಿ ಬಹಳ ವರ್ಷಗಳ ಕಾಲ ನಮ್ಮ ಕಾಂಗ್ರೆಸ್‌ನ ಸ್ನೇಹಿತರೇ ದೇಶವನ್ನು ಆಳಿದರು. ನೀವು ಒಳ್ಳೆಯದು ಮಾಡಿದ್ದರೂ ನಿಮಗೇ ಆ ಶ್ರೇಯಸ್ಸು ಸಿಗುತ್ತದೆ. ತಪ್ಪು ಮಾಡಿದ್ದರೆ ಆ ಹೊಣೆಗಾರಿಕೆಯನ್ನು ಹೊರುವುದಕ್ಕೆ ತಾವು ಸಿದ್ಧರಾಗಬೇಕು. ಇವೊತ್ತು ಪ್ರಶ್ನೆ ಏನೆಂದರೆ ಈ ದೇಶದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಈ 14 ತಿಂಗಳಲ್ಲಿ ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ಬಿ.ಜೆ.ಪಿ ಮತ್ತು ಜೆ.ಡಿ.ಎಸ್.ಗಳ ಸಮ್ಮಿಶ್ರ ಸರ್ಕಾರ ಯಾವ ಪ್ರಮಾಣದ ಹಣವನ್ನು ತೆಗೆದಿಟ್ಟಿದೆ ಎನ್ನುವುದನ್ನು ಹಿಂದೆ ನೀವು ಸರ್ಕಾರ ನಡೆಸತಕ್ಕಂಥ ಕಾಲದಲ್ಲಿ ನೀವೆಷ್ಟು ಹಣವನ್ನು ತೆಗೆದಿಟ್ಟಿದ್ದಿರಿ ಎಂಬ ಬಗ್ಗೆ ತುಲನೆ ಮಾಡಿ ನೋಡಿದಾಗ ಯಾರು ಯಾರ ಬಗ್ಗೆ ಎಷ್ಟು ಕಳಕಳಿಯನ್ನು ಹೊಂದಿದ್ದಾರೆ ಎನ್ನುವಂಥದ್ದನ್ನು ಅಂಕಿ ಅಂಶಗಳು ಹೇಳುತ್ತವೆ.

ಕರ್ನಾಟಕ ರಾಜ್ಯದಲ್ಲಿ ಎಸ್‌ಸಿ:ಎಸ್‌ಟಿ ವರ್ಗದ ಜನರಿಗಾಗಿ ಕಳೆದ 14 ತಿಂಗಳುಗಳಲ್ಲಿ ನಾವು ತೆಗೆದುಕೊಂಡಿರುವಂಥ ಕಾರ್ಯಕ್ರಮಗಳು, ಅನುಷ್ಠಾನಕ್ಕೆ ಬಂದಿರುವಂಥ ಯೋಜನೆಗಳನ್ನು ನೋಡಿ ಇಡೀ ನಾಡಿನ ಎಸ್‌ಸಿ:ಎಸ್‌ಟಿ ವರ್ಗದ ಜನರುಗಳು ಹತ್ತು ವರ್ಷಕ್ಕೆ ಮುಂಚೆಯೇ ಬಿ.ಜೆ.ಪಿ.:ಜೆ.ಡಿ.ಎಸ್. ಸಮ್ಮಿಶ್ರ ಸರ್ಕಾರ ಬಂದಿದ್ದರೆ ನಮ್ಮ ಜೀವನ ಇನ್ನೂ ಸುಧಾರಣೆಯಾಗುತ್ತಿತ್ತಲ್ಲ ಎಂದು ನಿಂತಲ್ಲಿ, ಕುಳಿತಲ್ಲಿ ಜನರು ಮಾತನಾಡುವಂಥ ಒಂದು ಪರಿವರ್ತನೆಯಾಗುತ್ತಿದೆ. ಇದನ್ನು

ನೀವು ಮರೆಯಬೇಡಿ. ನಾನು ಹೇಳುವುದು ಇಷ್ಟೆ ಅಧ್ಯಕ್ಷರೆ, ಯಾರೂ ಕೂಡ ಬೆನ್ನು ತಟ್ಟಿಕೊಳ್ಳುವಂಥ ಅಗತ್ಯವಿಲ್ಲ. ಮಾನ್ಯ ಧರ್ಮಸಿಂಗ್ ಮತ್ತು ಮಾನ್ಯ ಖರ್ಗೆಯವರ ಬಗ್ಗೆ ನನಗೆ ಗೌರವವಿದೆ. ಅವರ ಅನುಭವದಿಂದ ಕೆಲವು ಮಾತನ್ನು ಹೇಳಿದ್ದಾರೆ. ಇವೊತ್ತು ಇನ್ನೂ ಹೆಚ್ಚು ಎಸ್‌ಸಿ:ಎಸ್‌ಟಿ, ಹಿಂದುಳಿದ ವರ್ಗ, ಅಲ್ಪ ಸಂಖ್ಯಾತ ಜನರ ಬಗ್ಗೆ ಕೇವಲ ಭಾಷಣ ಮಾಡಿದರೆ ಆಗುವುದಿಲ್ಲ, ಮೂಗಿಗೆ ತುಪ್ಪ ಹಚ್ಚಿದರೆ ಆಗುವುದಿಲ್ಲ.

ಪ್ರತ್ಯಕ್ಷ ಕಾರ್ಯಕ್ರಮಗಳನ್ನು ಕೊಡುವುದರ ಮೂಲಕ ಅವರು ಜೀವನದಲ್ಲಿ ಒಂದು ಬದಲಾವಣೆಯನ್ನು ಕಾಣಬೇಕಾಗಿದೆ. ಅವರು ನೆಮ್ಮದಿಯಿಂದ ಬದುಕುವಂಥ ಕಾರ್ಯಕ್ರಮಗಳನ್ನಹು ರೂಪಿಸಬೇಕಾಗಿದೆ. ಆ ದಿಕ್ಕಿನಲ್ಲಿ ಹೆಜ್ಜೆಯನ್ನಿಡುವಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. ಎಸ್‌ಸಿ:ಎಸ್‌ಟಿ ವರ್ಗದ ಜನರಿಗೆ ಕಳೆದ ಎರಡು ಬಜೆಟ್‌ನಲ್ಲಿ ನಾವು ಇಟ್ಟಿರುವಂಥ ಹಣವನ್ನು ಹಿಂದಿನ ವರ್ಷಕ್ಕೆ ತುಲನೆ ಮಾಡಿದರೆ, ಅದೇ ರೀತಿಯಾಗಿ ನಾವು ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳಿಗೆ ಇಟ್ಟಿರುವಂಥ ಹಣ ಯಾವ ಪ್ರಮಾಣದಲ್ಲಿ ಹೆಚ್ಚಾಗಿದೆ ಎನ್ನುವ ಬಗ್ಗೆ ಒಂದೆರಡು ದಿವಸ ಚರ್ಚೆ ಮಾಡೋಣ. ನಾನು ಚರ್ಚೆ ಮಾಡುವುದಕ್ಕೆ ಸಿದ್ಧನಿದ್ದೇನೆ. ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ 2002ರಲ್ಲಿ ಯಾವ ನಂಜುಂಡಪ್ಪ ವರದಿ ಎಸ್.ಎಂ. ಕೃಷ್ಣಾರವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಆಯಿತೋ ಅದು ಏನಾಯಿತು ಸ್ವಾಮಿ? ಕಸದ ಬುಟ್ಟಿಗೆ ಹಾಕಿದ್ರಿ. ಇವೊತ್ತು 1567 ಕೋಟಿ ಅದಕ್ಕಾಗಿ ಇಟ್ಟರೆ ನೀವು ಸಂತೋಷ ಪಡಬೇಕಾಗಿತ್ತು, ಸ್ವಾಗತ ಮಾಡಬೇಕಾಗಿತ್ತು.

ಶ್ರೀ ಎನ್. ಧರ್ಮಸಿಂಗ್ :– ನೀವು ಬಂದು 14 ತಿಂಗಳುಗಳಾಯಿತು. ಡಾ॥ ನಂಜುಂಡಪ್ಪನವರ ವರದಿಯನ್ನು ಅನುಷ್ಠಾನ ಮಾಡುವುದಕ್ಕೆ ನೀವು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಹೇಳಿ. ಬೆಳಗಾಂ ಅಧಿವೇಶನದಲ್ಲಿ ಹೇಳಿದಿರಿ. ಆದರೆ ಎಷ್ಟು ಹಣ ಬಿಡುಗಡೆ ಮಾಡಿದಿರಿ? ಸುಮ್ಮನೇ ಭಾಷಣ ಮುಖಾಂತರ ಹೇಳಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಯಡಿಯೂರಪ್ಪನವರೆ ಒಂದ್ನಿಮಿಷ. ರೆಕಾರ್ಡ್ ಸರಿಯಾದ ರೀತಿಯಲ್ಲಿ ಸ್ಪಷ್ಟತೆಯಿಂದಿರಲಿ ಎನ್ನುವುದಕ್ಕೆ ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ ಈಗ ಇರತಕ್ಕಂಥ ಪ್ಲಾನಿಂಗ್ ಕಮಿಶನ್ ಪ್ರತಿ ಸ್ಟೇಟ್‌ನವರಿಗೆ ಡೈರಕ್ಷನ್ ಕೊಟ್ಟಿದ್ದಾರೆ. ಪಾಪ್ಯುಲೇಶನ್ ಅನುಗುಣವಾಗಿ ಪ್ಲಾನ್ ಔಟ್‌ಲೇನಲ್ಲಿ

ಅಷ್ಟು ಪರ್ಸೆಂಟೇಜ್ ಹಣವನ್ನು ಇಡಬೇಕು. ಇಡದೇ ಹೋಗಿದ್ದರೆ ನಿಮ್ಮ ಜನರಲ್ ಗ್ರ್ಯಾಂಟ್‌ನಲ್ಲಿ ನಾವು ಕಡಿತ ಮಾಡುತ್ತೇವೆ, ಮತ್ತು ಆ ಹಣ ಖರ್ಚಾಗದೇ ಹೋದರೆ ಲ್ಯಾಪ್ಸ್ ಆಗುವುದಿಲ್ಲ ಎನ್ನುವುದನ್ನು ಮಾಡಿದ್ದಾರೆ. ಅದಕ್ಕಾಗಿ ನಿಮಗೆ ದುಡ್ಡು ಹೆಚ್ಚಿಗೆ ಬಂದಿದೆ. ದಯವಿಟ್ಟು ಈ ರೀತಿಯಾಗಿ ಯಾವ ಪುಣ್ಯಾತ್ಮ ಮಾಡಿಕಳುಹಿಸಿದ್ದಾರೋ ಆ U.P.A. Government ಗೆ ಶಹಭಾಸ್‌ಗಿರಿ ಕೊಡಿ. ಅದನ್ನು ಬಿಟ್ಟು ನಾನು ಇಟ್ಟಿದ್ದೇನೆ, ನಾನು ಇಟ್ಟಿದ್ದೇನೆ ಎಂದು ಹೇಳಬೇಡಿ. ನೀವು ರೂಲ್ಸ್ ಪ್ರಕಾರ ಬರತಕ್ಕಂಥವರ ಬಗ್ಗೆ ಕೂಡ ಹೇಳಿ ಕ್ರೆಡಿಟ್ ತೆಗೆದುಕೊಳ್ಳುವುದು, ಇನ್ನೊಂದಕ್ಕೂ ಕೂಡ ಕ್ರೆಡಿಟ್ ತೆಗೆದುಕೊಳ್ಳುವುದಕ್ಕೆ ಹೋಗುವುದು. ಎಲ್ಲಕ್ಕೂ ಈ ರೀತಿ ಹೋಗಬೇಡಿ. ಯಾರು ಮಾಡಿದ್ದಾರೋ, ಎಲ್ಲಿ ಮೂಲ ಇದೆ, ಎಲ್ಲಿಂದ ಬಂದಿದೆ ಅವರಿಗೆ ಶಹಭಾಸ್‌ಗಿರಿ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಧನ್ಯವಾದ ಸಾರ್. ಈ ಗೈಡ್‌ಲೈನ್ಸ್ ಹಿಂದೆಯೂ ಇತ್ತು ಮತ್ತು ಈಗಲೂ ಇದೆ. ಹಿಂದೆ ಅಧಿಕಾರದಲ್ಲಿದ್ದಂಥ ನೀವು ಅದನ್ನು ಕಾರ್ಯರೂಪಕ್ಕೆ ತರಲಿಲ್ಲವೆಂದಂತಾಯಿತು. ಆ ಸಂದರ್ಭದಲ್ಲಿ ಇದನ್ನು ಮಾಡದಿದ್ದರೆ ಗ್ರ್ಯಾಂಟ್‌ನಲ್ಲಿ ಕಟ್ ಮಾಡಬೇಕಾಗುತ್ತದೆ ಎನ್ನುವಂಥ ಪರಿಸ್ಥಿತಿ ಏಕೆ ಬಂತೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಯಾವ ಪ್ರಮಾಣದ ಹಣವನ್ನು ಇಡಬೇಕಾಗಿತ್ತೋ ಆ ರೀತಿ ಇಡದೇ ಹೋದದ್ದರಿಂದ ಇವೊತ್ತು ಈ ರೀತಿ ಡೈರೆಕ್ಷನ್ ಕೊಡುವಂಥ ಪರಿಸ್ಥಿತಿ ಬಂತು. ನಾನು ಇದರ ಬಗ್ಗೆ ಹೆಚ್ಚು ಚರ್ಚೆ ಬೆಳೆಸುವುದಕ್ಕೆ ಹೋಗುವುದಿಲ್ಲ. ನಾನು ಇಷ್ಟೇ ಹೇಳಬಯಸುತ್ತೇನೆ. ಯಾವ ರೀತಿ ಪರಿಶಿಷ್ಟ ಜನಾಂಗದಲ್ಲಿ ಲೆಫ್ಟ್ ಮತ್ತು ರೈಟ್ ಎನ್ನುವಂಥ ಭೇದ ಭಾವನೆ ಬಂದು ತಮಗೆ ಸಿಗಬೇಕಾದಂಥ ಸವಲತ್ತುಗಳು ಸಿಗಲಿಲ್ಲ ಎಂದು ಹೇಳಿದಾಗ ನಾನೇ ಒಂದು ಕಮಿಟಿಯನ್ನು ನೇಮಕ ಮಾಡಿದ್ದೇನೆ ಎಂದು ಹೇಳಿ ಧರ್ಮಸಿಂಗ್‌ರವರು ಹೇಳಿದರೋ ಆ ರೀತಿಯ ಭಾವನೆ ಬಹುತೇಕ ದೊಡ್ಡ ಪ್ರಮಾಣದಲ್ಲಿರುವಂಥ ಎರಡೂವರೆ ಸಾವಿರ ತಾಂಡ ಇರುವಂಥ ಬಂಜಾರು ಸಮಾಜದಲ್ಲಿ ಬಂದಿದೆ. ಅವರಿಗೂ ಸಹ ಆ ತಾಂಡಾಗಳನ್ನು ರೆವಿನ್ಯೂ ಗ್ರಾಮಗಳಾಗಿ ಮಾಡಬೇಕೆಂದು ನಮ್ಮ ಅಪೇಕ್ಷೆ ಇದೆ.

ನೀವು ಮಾಡುವುದಕ್ಕಾಗಲಿಲ್ಲ. ಅದನ್ನು ನಾನು ಮಾಡಿ ತೋರಿಸುತ್ತೇವೆ. ಇವೊತ್ತು ಅದಕ್ಕಾಗಿ ಬೇರೆ ಪ್ರತ್ಯೇಕ ನಿಗಮವನ್ನು ಇಟ್ಟಿದ್ದೇವೆ. ಇವತ್ತೊ ಅಲ್ಲಿ

ಮತಾಂತರ ನಡೆಯುತ್ತಿದೆ. ಶೋಷಣೆ ನಡೆಯುತ್ತಿದೆ. ಈ ಜನಾಂಗವನ್ನು ಮೇಲೆ ಎತ್ತಬೇಕು ಎನ್ನುವ ಕಳಕಳಿಯಿಂದ ನಾನು ಒಂದು ನಿಗಮ ಮಾಡಿ 10 ಕೋಟಿ ರೂಪಾಯಿಗಳನ್ನು ಇಟ್ಟರೆ ನೀವು ಅದನ್ನು ಸ್ವಾಗತ ಮಾಡುವುದರ ಬದಲಾಗಿ ನೀವು ವೆಲ್‌ಗೆ ಬಂದರೆ ನಾವೇನು ಮಾಡುವುದಕ್ಕಾಗುತ್ತದೆ ಸ್ವಾಮಿ? ನಾನು ಹೆಚ್ಚು ಬೆಳೆಸುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನಾವು ಅದಕ್ಕೋಸ್ಕರ ವೆಲ್‌ಗೆ ಬಂದಿಲ್ಲ. ನೀವು ಆ ರೀತಿ ಅದನ್ನು ಇದಕ್ಕೆ ಸಂಬಂಧ ಕಲ್ಪಿಸಿ ಮಾತನಾಡಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಸಾರ್ ಏಕೆ ಸಾರ್ ಮಾತನಾಡಬಾರದು? ಮಾನ್ಯ ಅಧ್ಯಕ್ಷರೆ ಅವರಿಗೇನಾಗಿದೆಯೆಂದರೆ, ಮಾನ್ಯ ಧರ್ಮಸಿಂಗ್‌ರವರೆ ನನಗೆ ನಿಮ್ಮ ನೋವು ಅರ್ಥವಾಗುತ್ತದೆ ಸಾರ್. ನಿಮ್ಮ ನೋವೇನೆಂದರೆ,

ಶ್ರೀ ಎನ್. ಧರ್ಮಸಿಂಗ್ :- ಈಗ ಕುಮಾರಸ್ವಾಮಿಯವರದ್ದು ಮತ್ತು ನಿಮ್ಮದು ನೋವೇನಿದೆ, ಈಗ ಯಾರೂ ಅಲ್ಲಿ ಪ್ರಕಾಶ್‌ರವರು ಬಿಟ್ಟರೆ ಕುಳಿತಿಲ್ಲ. ಅಂದರೆ ಬೆಂಬಲ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಅಂಥ ಸಹಾಯ ಬೇಕೆಂದರೆ ನಿಮ್ಮ ಸಲಹೆಯನ್ನು ತೆಗೆದುಕೊಳ್ಳುತ್ತೇನೆ ಸಾರ್. ಅಂಥ ಸಹಾಯ ತೆಗೆದುಕೊಳ್ಳಬೇಕಾದರೆ ನಿಮ್ಮ ಅನುಭವದ ಸಲಹೆಗಳ ಸಹಾಯವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಧರ್ಮಸಿಂಗ್ :- ಈಗ ಹಕ್ಕುಚ್ಯುತಿಯಾಗಿರುವ ಬಗ್ಗೆ ನಾವೇನು ಹೇಳಿದ್ದೇವೆ ಅದರ ಬಗ್ಗೆ ಮಾತ್ರ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಹೇಳುತ್ತಿದ್ದೇನೆ ಸಾರ್. ನೀವು ಬೇರೆ ಬೇರೆ ಮಾತನಾಡಿದ್ದರಿಂದ ನಾನು ಮಾತನಾಡಬೇಕಾಯಿತು. ನಾನು ಇಷ್ಟೇ ಈಗ ಹೇಳಬಯಸುವುದು, ನಮ್ಮ ಕಾಂಗ್ರೆಸ್ಸಿನ ಸ್ನೇಹಿತರಿಗೆ ತಾವು ಇಷ್ಟು ವರ್ಷಗಳು ಸಾಕಿಕೊಂಡಿದ್ದರು, ಗೌಪ್ಯವಾಗಿ ಮುಚ್ಚಿಟ್ಟಿದ್ದರು, ಅವರು ಬೇರೆ ಕಡೆ ನೋಡಿದರೆ ಎಲ್ಲಿ ಆಕರ್ಷಿತರಾಗಿ ಹೋಗುತ್ತಾರೋ ಎಂದು ಹೇಳಿ ನಿಮ್ಮ ಮಾತನ್ನು ಕೇಳಿ,,, ಸಾರ್ ಈ 25 ವರ್ಷ ನೀವು ನಮ್ಮ ಮೇಲೆ ಏನು ಹೇಳಿಕೊಂಡು ಬಂದಿರಿ? ಜನಸಂಘಕ್ಕಾಗಲಿ ಏನು ಹೇಳಿದಿರಿ? ಇವರು ಹರಿಜನ ವಿರೋಧಿಗಳು, ಇವರು ಅಲ್ಪಸಂಖ್ಯಾತ ವಿರೋಧಿಗಳು ಎಂದು ಹೇಳಿಕೊಂಡು ಅವರ ಆಧಾರದ ಮೇಲೆ

ನೀವು ಚುನಾವಣೆ ಗೆಲ್ಲುವುದಕ್ಕೆ ಹೋಗುತ್ತಿದ್ದೀರಿ. ಆದರೆ ಈಗ ಅವರ ಕಣ್ತೆರೆದಿದೆ. ಇವೊತ್ತು ಈ 14 ತಿಂಗಳಲ್ಲಿ ಕುಮಾರಸ್ವಾಮಿ, ಯಡಿಯೂರಪ್ಪ ಈ ಪರಿಶಿಷ್ಟ ಜಾತಿ, ವರ್ಗಕ್ಕೆ, ಹಿಂದುಳಿದ ವರ್ಗಕ್ಕೆ ಮಾಡಿರುವಂಥ ಸಹಾಯವನ್ನು ನೋಡಿ ಹತ್ತು ವರ್ಷಕ್ಕೆ ಮುಂಚೆಯೇ ಈ ಸಮ್ಮಿಶ್ರ ಸರ್ಕಾರ ಬರಬೇಕಾಗಿತ್ತು ಎನ್ನುವಂಥ ಜಾಗೃತಿ ಮೂಡಿದೆ. ನಿಮ್ಮ ಓಟ್ ಬ್ಯಾಂಕ್‌ಗೆ ನಾವು ಕೈ ಹಾಕಿದ್ದೇವೆ ಎನ್ನುವ ಸಂಕಟದಿಂದ ನೀವು ಈ ರೀತಿ ಮಾತನಾಡುತ್ತಿದ್ದೀರಿ, ಇದನ್ನು ಬಿಟ್ಟರೆ ನಿಮಗೆ ಬೇರೆ ದಾರಿ ಇಲ್ಲ. ಯಾವುದೇ ಹಕ್ಕುಚ್ಯುತಿ ಆಗಿಲ್ಲ ಸ್ವಾಮಿ. ದಯಮಾಡಿ ಇದರ ಬಗ್ಗೆ ಕಾಲಹರಣ ಮಾಡದೇ ದಯವಿಟ್ಟು ಇದನ್ನು ಕೈಬಿಟ್ಟು ಬೇರೆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್ :- ಮಾನ್ಯ ಅಧ್ಯಕ್ಷರೆ, ಇವೊತ್ತು ನಾವು ಪ್ರಿವಿಲೇಜ್ ಮೋಶನ್ ಅನ್ನು ತಂದಿದ್ದೇವೆ. ಈ ಸದನಕ್ಕೆ ಹಕ್ಕುಚ್ಯುತಿಯಾಗಿದೆ ಎನ್ನುವಂಥ ಮಾತನ್ನು ಹೇಳಿದ್ದೇವೆ. ಯಾವ ವಿಷಯಗಳು ಈ ಮನೆಯಲ್ಲಿ ಚರ್ಚೆಯಾಗಿದೆ, ಎಲ್ಲಿ ನಿಮ್ಮದು ವಿಶೇಷವಾದ ಘೋಷಣೆಗಳು 203 ಕೋಟಿ ರೂಪಾಯಿಗಳದ್ದು ಏನಿತ್ತೋ ಅದನ್ನೂ ಕೂಡ ನಾವು ಒಪ್ಪಿದ್ದೇವೆ. ಆದರೆ ವಿಧಾನ ಪರಿಷತ್ತಿನಲ್ಲಿ ಹೋಗಿ ಮತ್ತೊಂದು 17 ಕೋಟಿ ರೂಪಾಯಿಗಳದ್ದನ್ನು ತಾವು ಮಾಡಿದ್ದೀರಿ. ಆದರೆ ಆ ರೀತಿ ಮಾಡತಕ್ಕಂಥಾದ್ದು ಇಲ್ಲ. ಈ ಸದನದಲ್ಲಿ ಆ ಬಜೆಟ್ ಬಗ್ಗೆ ಚರ್ಚೆಯೇ ಆಗಿಲ್ಲ. ತಾವು ಹೇಳಿಯೂ ಇಲ್ಲ. ನಾವು ಅದಕ್ಕೆ ಮನ್ನಣೆಯನ್ನೂ ಕೂಡ ಕೊಟ್ಟಿಲ್ಲ. ಆದುದರಿಂದಾಗಿಯೇ ಇವೊತ್ತು ಈ ಸದನದ ಹಕ್ಕುಚ್ಯುತಿಯಾಗಿದೆಯೆಂದು ಹೇಳುತ್ತಿರುವುದಕ್ಕೆ ಸಂಬಂಧಪಟ್ಟಂತೆ ಅಧ್ಯಕ್ಷರೆ ತಾವು ರಕ್ಷಣೆಗೆ ಬರಬೇಕು. ಅದರ ಬಗ್ಗೆಯೇ ನಾವು ಪ್ರಸ್ತಾಪ ಮಾಡಿದ್ದೇವೆ. ಅದಕ್ಕೆ ನೀವು ಎಲ್ಲಿ ಹಕ್ಕುಚ್ಯುತಿಯಾಗಿದೆ? ನಾನು ಆಶ್ವಾಸನೆಯನ್ನು ಕೊಟ್ಟಿದ್ದೆ ಎಂದಿರಿ. ಆ ಮಾತಿಲ್ಲ.

ಬಜೆಟ್ ಮೇಲೆ ವಿವರವಾದ ಚರ್ಚೆ ಆಗಲಿಲ್ಲ. ಇನ್ನೂ ಒಂದಾರು ತಿಂಗಳಾದ ಮೇಲೆ ನಿಮಗೇ ನಾನು ಹೇಳುತ್ತೇನೆ. ಇವೊತ್ತು ಹೋಗಿ ನೋಡಿ ರೈತರಿಗೇನಾಗಿದೆಯೆಂದು, ಕುಡಿಯುವ ನೀರಿನ ಸಮಸ್ಯೆ ಹಾಗೆಯೇ ಮುಂದುವರೆದಿದೆ. ಕಬ್ಬು ಬೆಳೆಗಾರರ ಪರಿಸ್ಥಿತಿ ಏನಾಗಿದೆ? ಇವೊತ್ತು ಕರ್ನಾಟಕ ರಾಜ್ಯದ ಎಲ್ಲ ಕಡೆಯಲ್ಲಿಯೂ ಕೂಡ ಉತ್ತರ ಕರ್ನಾಟಕದ ಭಾಗದಲ್ಲಿ ಯಡಿಯೂರಪ್ಪನವರೆ ತಮ್ಮ ವರ್ತನೆ ಬಗ್ಗೆ ಅಲ್ಲಿ ಎಲ್ಲರೂ ಕೂಡ ಹೇಳುತ್ತಿದ್ದಾರೆ. ಕಬ್ಬು ಬೆಳೆಗಾರರ ಬಗ್ಗೆ

ಚರ್ಚೆಯಾಯಿತು. ತಾವು ಸದನದಲ್ಲಿ ಇದ್ದಿರಿ. ಅಲ್ಲಿ ಉದಾಸಿಯವರು ಉತ್ತರ ಕೊಟ್ಟರು. ತಾವೇನಾದರೂ ಮಹಾರಾಷ್ಟ್ರದಲ್ಲಿ ಯಾವ ರೀತಿಯಾಗಿ ಒಂದೊಂದು ಟನ್‌ಗೆ ಸಬ್ಸಿಡಿ ಕೊಡುತ್ತಿದ್ದಾರೆ ಎಂದು ತಿಳಿದುಕೊಂಡು ಆಶ್ವಾಸನೆಯನ್ನೇನಾದರು ಕೊಟ್ಟಿದ್ದೀರ? ರೈತರ ಬಗ್ಗೆ ಚಿಂತನೆಯನ್ನು ಮಾಡಿದ್ದೀರ? ರೈತರ ಆತ್ಮಾಹುತಿ ಬಗ್ಗೆ ಮಾಡಿದ್ದೀರ? ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ 2690 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದಕ್ಕೆ ನೀವು ಇನ್ನೂ ಹಣ ಬಿಡುಗಡೆ ಮಾಡಿಲ್ಲ.

ಇವೊತ್ತು ತಾವೇನು ಹೇಳುತ್ತಿದ್ದೀರಿ, ಇದೇ ರೀತಿಯ ನಿದರ್ಶನ ಲೋಕಸಭೆಯಲ್ಲಿಯೂ ಕೂಡ ಆಗಿತ್ತು. ಗುಜರಾತ್‌ನ ಬಜೆಟ್, ಅಲ್ಲಿರತಕ್ಕಂಥ ರಾಜ್ಯದ ಹಣಕಾಸಿನ ಸಚಿವರು ಲೋಕಸಭೆಗೆ ಮಂಡಿಸದೇ ರಾಜ್ಯಸಭೆಯಲ್ಲಿ ಮಂಡಿಸಿದರು. ಗುಜರಾತ್‌ನ 75–76ನೇ ಸಾಲಿನ ಬಜೆಟ್‌ಗೆ ಮನ್ನಣೆ ಕೊಟ್ಟಂಥ ರೀತಿಯಲ್ಲಿ ಲೋಕಸಭೆಯಲ್ಲಿ ಮತ್ತು ರಾಜ್ಯಸಭೆಯಲ್ಲಿ ಪ್ರಸ್ತಾವವಾಗಬೇಕು. ಅವರು ಲೋಕಸಭೆಯಲ್ಲಿ ಮಂಡಿಸದೇ ರಾಜ್ಯಸಭೆಯಲ್ಲಿ ಮಂಡಿಸಿದರು. ಇದು ಚರ್ಚೆಗೆ ಅಲ್ಲಿ ಬಂದಾಗ ಹಣಕಾಸಿನ ಸಚಿವರು ಕ್ಷಮೆ ಯಾಚನೆ ಕೇಳಿದರು. ಈ ತರಹ ತರುವುದು ಸೂಕ್ತವಲ್ಲ, ಇದು ಲೋಕಸಭೆಯಲ್ಲಿ ಮಂಡನೆಯಾಗಿ ಚರ್ಚೆಯಾಗಬೇಕಾಗಿತ್ತು. ಲೋಕಸಭೆಯಲ್ಲಿ ಮಂಡಿಸದೇ ರಾಜ್ಯಸಭೆಯಲ್ಲಿ ಮಂಡಿಸಿದ್ದೇವೆ. ತಪ್ಪಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇವೊತ್ತು ನೀವೂ ಕೂಡ ಅದೇ ರೀತಿ ನಮ್ಮಿಂದ ತಪ್ಪಾಗಿದೆಯೆಂದು ಕ್ಷಮೆಯಾಚನೆ ಕೇಳಬೇಕು. ನೀವು ಕೇವಲ ಘೋಷಣೆಗಳನ್ನು ಮಾಡಿರುವುದರ ಬಗ್ಗೆ ಕೂಡ ಉತ್ತರ ಕೊಡಬೇಕಾಗಿತ್ತು. ಅದನ್ನೂ ಕೂಡ ನೇರವಾಗಿ ಕೊಟ್ಟಿಲ್ಲ. ಮತ್ತೊಂದು ವಿಚಾರ. ತಾವು ಕುಮಾರಸ್ವಾಮಿಯವರ ಜೊತೆ ಮಾತನಾಡಿ ನಿರ್ಧಾರ ತೆಗೆದುಕೊಂಡೇ ಘೋಷಣೆ ಮಾಡಿದ್ದೇನೆ ಎಂದಿರಿ.

5 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಮೊತ್ತದ ಯೋಜನೆಗಳನ್ನು ತಾವೇನು ಘೋಷಣೆ ಮಾಡಿದ್ದೀರಿ ಅವುಗಳ ಬಗ್ಗೆ ಪ್ರತಿಯೊಂದಕ್ಕೂ ಕೂಡ ಸಂಪುಟ ಸಭೆಯಲ್ಲಿ ಚರ್ಚೆಯಾಗಬೇಕಾಗಿತ್ತು. ನಾವು ಮತ್ತು ಸಿದ್ದರಾಮಯ್ಯನವರು ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಕೂಡ ಹಿಂದೆ ಒಂದೊಂದು ಕೋಟಿ. ಎರಡು ಕೋಟಿ ಯೋಜನೆ ವಿಚಾರದಲ್ಲಿಯೂ ಕೂಡ ಸಾಕಷ್ಟು ವಾದ ವಿವಾದಗಳಾಗಿವೆ, ಮಾತುಗಳಾಗಿವೆ. ನಿಮ್ಮ ಬಜೆಟ್ ಮಂಡನೆ ಮಾಡತಕ್ಕಂಥ ಎಲ್ಲ ಸ್ವರಗಳೂ ಹೊರಗಡೆ ಬಂದಿವೆ. ಯಾವ ರೀತಿಯಾಗಿ ರೇವಣ್ಣನವರು ಹೇಳಿದ್ದಾರೆ, ಯಾವ ರೀತಿಯಾಗಿ

ಚಲುವರಾಯಸ್ವಾಮಿಯವರು ಹೇಳಿದ್ದಾರೆ, ಯಾವ ರೀತಿಯಾಗಿ ಬಂಡೆಪ್ಪ ಕಾಶೆಂಪುರ್‌ರವರು ಹೇಳಿದ್ದಾರೆ ಅವೆಲ್ಲ ಬಂದಿದೆ. ಅದಕ್ಕೇ ನಾವು ಏನು ಹೇಳುತ್ತಿದ್ದೇವೆಂದರೆ ಇದು ಬಿ.ಜೆ.ಪಿ.ಯ ಒಂದು ಬಜೆಟ್ ಎನ್ನತಕ್ಕಂಥ ಮಾತನ್ನು ನಾವು ಖಡಾಖಂಡಿತವಾಗಿ ಹೇಳುತ್ತೇವೆ.

ಇವೊತ್ತು ತಾವು ಈ ಸಭೆಗೆ ಹೇಳಬೇಕಾಗುತ್ತದೆ, ಈ ರೀತಿಯಾದ ಘೋಷಣೆಗಳ ಮುಖಾಂತರ ಎಲ್ಲಿ ಬಜೆಟ್‌ನಲ್ಲಿ ಅವುಗಳನ್ನು ಅಳವಡಿಸಲಾಗದೇ ತಾವು ಕಡೆಯಲ್ಲಿ ಉತ್ತರ ಕೊಡತಕ್ಕಂಥ ಕಾಲದಲ್ಲಿ 5 ಕೋಟಿ, 10 ಕೋಟಿ. 20 ಕೋಟಿ ಎನ್ನುವ ರೀತಿಯಲ್ಲಿ ಹೇಳಿದರೆ ಅದು ಪ್ರಸ್ತುತ ಅಲ್ಲ. ಅದು ಪ್ರಸ್ತುತವಲ್ಲ. ಇವತ್ತು ಈ ಸದನದ ಹಕ್ಕುಚ್ಯುತಿಯಾಗಿದೆ. ಇಲ್ಲಿ ಮೊದಲು ಪ್ರಸ್ತಾಪ ಮಾಡದೇ ಇರುವಂತಹ ವಿಷಯಗಳು ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪ ಮಾಡಿದ್ದಾರೆ. You have adopted un democratic method. ಇವತ್ತು ಇಲ್ಲಿ ನಮ್ಮ ಕಾನೂನು ಸಚಿವರಿದ್ದಾರೆ. ಅದರ ಬಗ್ಗೆ ಇವತ್ತು ಸ್ಪಷ್ಟವಾಗಿ ಹೇಳಬೇಕು. ಎಲ್ಲಾ ಸಾರಿಸಿ ಹೇಳುವುದಲ್ಲ. ಇಂತಹ ಒಂದು ಸಂದರ್ಭದಲ್ಲಿ ಇವತ್ತು ಸರಿಯಾದ ರೀತಿಯಲ್ಲಿ ಎಲ್ಲೆಲ್ಲಿ lapses ಆಗಿದೆ ಮತ್ತು ಸರ್ಕಾರದ ಪರವಾಗಿದೆ ಎಂದು ಕೂಡ ಹೇಳಬೇಕು.

ಶ್ರೀ ಸಿದ್ದರಾಮಯ್ಯ :- ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಯಡಿಯೂರಪ್ಪನವರು ಬೇರೆ ರೀತಿಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ನಾನು ಅದನ್ನು Appropriation Bill ನಲ್ಲಿ ಸೇರಿಸಿಲ್ಲ, Budget ನಲ್ಲಿ 47,950 ಕೋಟಿ ಏನು ಖರ್ಚು ಮಾಡಬೇಕೆಂದು expected estimated expenditure ಏನು ಹೇಳಿದ್ದೇವೆ, ಅದರಲ್ಲಿ 47,729 ಕೋಟಿ ರೂಪಾಯಿ Receipts ಎಂದು ಹೇಳಿದ್ದೇವೆ, ಅದರಲ್ಲಿ 47,729 ಕೋಟಿ ರೂಪಾಯಿ Receipts ಎಂದು ಹೇಳಿದ್ದಾರೆ. ಎಂದರೆ Budget ಜೊತೆ Supplementary Estimates ಕೂಡ ಇಡಬಹುದಾ? ನಾವು Supplementary Estimate ಗೆ ಒಪ್ಪಿಗೆ ಪಡೆದುಕೊಳ್ಳುತ್ತೇವೆ ಎಂದು ಸದನದ ಮುಂದೆ ಮಂಡಿಸಿ ಅದನ್ನು ಈಗಲೇ ಮಾಡಿಬಿಡಬಹುದೆಂದು ಯಾವ provision ನಲ್ಲಿ ಇದೆ ಹೇಳಿ?

ನನಗೆ ಗೊತ್ತಿರುವ ಹಾಗೆ ಕರ್ನಾಟಕದ ಇತಿಹಾಸದಲ್ಲಿ ಈ ರೀತಿ ಒಂದೇ ಒಂದು Budget ಮಂಡಿಸಿರುವುದನ್ನು ತೋರಿಸಿಬಿಡಲಿ. ಇದು politically motivated. ಜನರ ಮುಂದೆ ಹೋಗಿ, I do not know, ಬಹುಶಃ ಇವರಿಗೆ

ಸರ್ಕಾರದ ಅಭದ್ರತೆ ಪ್ರಾರಂಭವಾಗಿರಬೇಕು ಎಂದು ಕಾಣಿಸುತ್ತದೆ. ಮುಂದೆ ಚುನಾವಣೆ ಬರುತ್ತದೆ, ಆದುದರಿಂದ ಈಗಲೇ ಹೇಳಿಕೊಂಡು ಹೊರಟು ಹೋಗಿ ಬಿಡೋಣವೆಂದು ಈ ರೀತಿ ಪ್ರಯತ್ನ ಮಾಡಿರಬಹುದು. ಆದರೆ Budgetನ Sanctity ಹೋಯಿತು. It is going to be a very bad precedent. Constitution ನ Article 202ರಲ್ಲಿ ಯಾವ provision ಕೂಡ ಇಲ್ಲ. Article 205 ಮಾಡಿರುವುದು ಮುಂದೆ ಬರುಬಹುದಾದಂತಹ ಬಜೆಟ್‌ನಲ್ಲಿ ಹೇಳಿರತಕ್ಕಂಥ ಖರ್ಚುಗಳು ಮತ್ತು ಕಾರ್ಯಕ್ರಮಗಳಿಗೆ ದುಡ್ಡು ಸಾಲದೇ ಹೋದರೆ ಅಥವಾ ಹೊಸ ಕಾರ್ಯಕ್ರಮಗಳು ಬಂದು ನಮಗೆ ಅದಕ್ಕೆ ಮುಂದಾಲೋಚನೆ ಮಾಡುವುದಕ್ಕೆ ಆಗದೇ ಇದ್ದರೆ ಅದಕ್ಕೆ Constitution ನಲ್ಲಿ Article 205 ಅನ್ನು ಅಳವಡಿಸಿರುವುದು. ಆದರೆ ನೀವು ಈಗಲೇ 205 ಅನ್ನು budget ಜೊತೆಯಲ್ಲಿ ಹೇಳಿದ್ದೀರಿ. It is very bad.

ಎರಡನೆಯದಾಗಿ ಮೊದಲು ಆ ವಿಷಯವನ್ನು ಆ ಮನೆಯಲ್ಲಿ announce ಮಾಡಿಬಿಟ್ಟು, ಆ ವಿಚಾರ ಇಲ್ಲಿ ಚರ್ಚೆಯಾಗಲಿಲ್ಲ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ. ಇವರು ಉತ್ತರ ಕೊಡಬೇಕಾದರೆ ಹೇಳೋಣವೆಂದರೆ ಅವಕಾಶ ಸಿಗಲಿಲ್ಲ. ಈ ಎಲ್ಲಾ ಕಾರಣಗಳಿಂದ breach of privilege ಆಗಿದೆ. ಇದು ಒಂದು. ಇನ್ನು ತೆರಿಗೆ ಬಗ್ಗೆ; ಇದು ನಮ್ಮ ಕಾಲದಲ್ಲಿ ಬಹಳ ದೊಡ್ಡದಾಗಿ ಬೆಳೆದಿರುವುದು, ಯಾರ ಕಾಲದಲ್ಲೂ ಕೂಡ ಇರಲಿಲ್ಲವೆಂದು ಅಂದುಕೊಂಡಿದ್ದಾರೆ. 2005–06ರಲ್ಲಿ Revised Estimates 19,504.80 ಕೋಟಿ ರೂಪಾಯಿ ಇದ್ದು, ಅದರ ಮೇಲೆ ಇವರು 22,000 ಕೋಟಿ ರೂಪಾಯಿ ಎಂದು ಹೇಳುತ್ತಾರೆ. ಎಂದರೆ 3,000 ಕೋಟಿ ರೂಪಾಯಿ ಜಾಸ್ತಿಯಾಗಿದೆ. ಅದಕ್ಕಿಂತ ಹಿಂದೆ 2004–05ರಲ್ಲಿ 14,000 ಕೋಟಿ ರೂಪಾಯಿಯಿಂದ 19,000 ಕೋಟಿ ರೂಪಾಯಿಯಾಗಿದೆ. ನಿಮ್ಮ ಕಾಲದಲ್ಲಿ ಭಾರಿ ಆಗಿ ಹೋಗಿಬಿಟ್ಟಿದೆ, ಬೇರೆಯವರ ಕಾಲದಲ್ಲಿ ತೆರಿಗೆ ಬರುತ್ತಿದ್ದುದು ಎಲ್ಲೋ ಹೊರಟು ಹೋಗಿದೆ, ಅದೆಲ್ಲಾ ಕಟ್ಟಿಬಿಟ್ಟಿದ್ದರು ಎಂದು ವಾದ ಮಾಡಿ ಹೊರಗಡೆ argument ಮಾಡುವುದಿದೆಯಲ್ಲ ಅದು ಜನರನ್ನು ತಪ್ಪುದಾರಿಗೆ ಎಳೆಯುವಂಥಾದ್ದು, ಸರಿಯಾದುದಲ್ಲ. ಇದು ರಾಜಕೀಯವಾದಂತಹ ಭಾಷಣವೇ ಹೊರತು ನಿಮ್ಮ ಅಂಕಿಅಂಶಗಳ ಮೂಲಕ ಹೇಳುವಂಥಾದ್ದಲ್ಲ, ಬಜೆಟ್‌ಗೆ ಸೀಮಿತವಾಗಿ ಹೇಳುವಂಥಾದ್ದಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಒಂದೇ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಬಹುಶಃ ಉತ್ತರ ಅವರಲ್ಲಿ ಇರಬಹುದು ಎಂದುಕೊಂಡಿದ್ದೇನೆ. ಒಂದು ಸ್ಪಷ್ಟವಾಯಿತು. ಇಲ್ಲಿ ಏನು additional ಆಗಿ ಆಶ್ವಾಸನೆ ಕೊಟ್ಟಿದ್ದರು, ಅದ್ಯಾವುದೂ ಬಜೆಟ್‌ನಲ್ಲಿ ಬಂದಿಲ್ಲ. ಅದರ ಬಗ್ಗೆ ಅವರು ನಾನು ಎಲ್ಲರ ಅಭಿಪ್ರಾಯಗಳನ್ನು ತಿಳಿದುಕೊಂಡು announce ಮಾಡಿದ್ದೇನೆ ಎಂದು ಹೇಳಿದ್ದಾರೆ. ಎಂದರೆ it is not part and parcel of this budget. ಮುಂದೆ ಹಣ ಬಂದಾಗ ನಾವು ಕೊಡುತ್ತೇವೆ. ಏಕೆಂದರೆ Municipality and Urban Development ಚುನಾವಣೆಗಳಿವೆ ಎಂದು ಘೋಷಣೆಯನ್ನು ಮೊದಲು ಮಾಡಿದ್ದಾರೆ. ಈಗಾಗಲೇ ಇಂಥಾದ್ದೆ ಒಂದು ಘಟನೆ ಲೋಕಸಭೆಯಲ್ಲಿ ನಡೆದಾಗ, ಲೋಕಸಭೆಯಲ್ಲಿ State Finance Minister ರವರು apology ಕೇಳಿದರು.

ಅದನ್ನು ಇಲ್ಲಿ quote ಮಾಡುತ್ತೇನೆ. "To quote an instance on 5th March 1975, the minister of State for Finance apologized to the Lok Sabha on account of presentation of Gujarat Budget in 1975-76 in the Rajya Sabha before its presentation to the Lok Sabha and explained the circumstances under which it was done." ಎಂದರೆ ಅಲ್ಲಿ President rule ಇತ್ತು. ಆ ಬಜೆಟ್‌ನ್ನು ಮೊದಲು ಲೋಕಸಭೆಯಲ್ಲಿ ಮಂಡಿಸಬೇಕಾಗಿತ್ತು. ಅದಕ್ಕೆ Minister of State of Finance ಅವರು ಅದನ್ನು ಲೋಕಸಭೆಯಲ್ಲಿ ಮಂಡಿಸುವುದು ಬಿಟ್ಟು ರಾಜ್ಯಸಭೆಯಲ್ಲಿ ಮಂಡಿಸಿದರು. ಆಗ ಲೋಕಸಭೆಯಲ್ಲಿ ಅದರ ಬಗ್ಗೆ ಏಕೆ ಈ ರೀತಿ ಮಾಡಿದಿರಿ ಎಂದು exception ತೆಗೆದುಕೊಂಡರು. ಆಗ ಅವರು ಇದು ತಪ್ಪಾಗಿದೆ, ನಾನು ಅದಕ್ಕೆ ಕ್ಷಮೆಯನ್ನು ಕೇಳುತ್ತೇನೆ. ಮೊದಲು ಇದನ್ನು ಈ ಸದನದಲ್ಲಿ ನಾನು ತರಬೇಕಾಗಿತ್ತು, ಆ ರೀತಿ ತರಬೇಕಾಗಿರುವುದರಲ್ಲಿ ಲೋಪವಾಗಿದೆ. ಇದು ತಪ್ಪಾಗಿದೆ ಎಂದು ಹೇಳಿ ಅವರು ಕ್ಷಮೆಯನ್ನು ಕೇಳಿದ್ದಾರೆ.

And this is the precedent. ಅದಕ್ಕೆ ನಾವು ಇದನ್ನೆಲ್ಲಾ quote ಮಾಡಿ ಹೇಳಿದರೂ ಕೂಡ ಇದು breach of privilege ಆಗಲ್ಲ, ಇದು ತಪ್ಪಾಗಿಲ್ಲವೆಂದು ಹೇಳುತ್ತಿದ್ದಾರೆ. ಮೊದಲು ಈ ಮನೆಯಲ್ಲಿ ತರದೇ ಮೇಲ್ಮನೆಯಲ್ಲಿ ನೇರವಾಗಿ announce ಮಾಡಿದಿರಿ ಎಂದು quote ಮಾಡಿ ಹೇಳಿದರೂ ಕೂಡ

ಏಕೋ ಏನೋ ಇದರ ಬಗ್ಗೆ ಬೇರೆ ರೀತಿಯಾದ ಧೋರಣೆಯನ್ನು ತಾಳುತ್ತಿದ್ದಾರೆ. ಕನಿಷ್ಟ, ನಾನೇನು ಒಂದು instance quote ಮಾಡಿದ್ದೇನೆ, ಅದರ ಮೇಲಾದರೂ ಕೂಡ apology ಕೇಳಿಕೊಂಡು ಸರಿಪಡಿಸಿಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ತಾವು ತಮ್ಮ ಪೀಠದಿಂದ ಕೊಡುವಂತಹ ಆದೇಶದ ಚೌಕಟ್ಟಿನಲ್ಲಿ ನಾವು ಇಲ್ಲಿ ಕೆಲಸವನ್ನು ಮಾಡುತ್ತೇವೆ. ನಾನು ಈ ಮನೆಯಲ್ಲಿ ಹಣಕಾಸಿನ ಸಚಿವನಾಗಿ ಒಂದು ಮಾತನ್ನು ಹೇಳುತ್ತೇನೆ, 220 ಕೋಟಿ ರೂಪಾಯಿಯ ಹೊಸ ಕಾರ್ಯಕ್ರಮಗಳನ್ನು ಯಾವ್ಯಾವುದು ಘೋಷಣೆ ಮಾಡಿದ್ದೇನೆ, ಅದಕ್ಕೆ ಒಂದೂ ಕೊರತೆಯಾಗದ ಹಾಗೆ ನಮ್ಮ ಸಚಿವರ ಮತ್ತು ಶಾಸಕರ ಸಲಹೆಗಳನ್ನು ತೆಗೆದುಕೊಂಡು ಇನ್ನೂ ಹೆಚ್ಚು ಕಾರ್ಯಕ್ರಮಗಳನ್ನು ಘೋಷಣೆ ಮಾಡಿ ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಬದ್ಧನಾಗಿದ್ದೇನೆ. ಇದು ಮೊದಲನೆಯ ವಿಚಾರ. ಎರಡನೆಯದಾಗಿ, ಇವತ್ತು ನೋಡಿ, ನಮ್ಮ ಬಜೆಟ್‌ನ ಚಿಂತನೆ ಏನಿದೆಯೆಂದರೆ ಗಾಂಧೀಜಿಯ ಗ್ರಾಮ ಸ್ವರಾಜ್ಯದ ಕನಸು ನನಸಾಗಿಸುವಂತಹ ಪ್ರಯತ್ನ ಸಂತಸದಾಯಕ ಎಂದು ಗಾಂಧೀವಾದಿ ಡಾ॥ ಶ್ರೀನಿವಾಸಯ್ಯನವರು ಹೇಳಿರುವಂತಹ ಲೇಖನ.

ಶ್ರೀ ಎನ್. ಧರ್ಮಸಿಂಗ್ :- ಅದನ್ನೆಲ್ಲಾ ತೆಗೆದುಕೊಂಡು ಏನು ಮಾಡುತ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ :- ನೀವು ಏಕೆ ಕೇಳುವುದಿಲ್ಲ? ನಾನು ಇಷ್ಟೇ ಹೇಳುವಂಥಾದ್ದು....

ಶ್ರೀ ಸಿದ್ದರಾಮಯ್ಯ :- L.C.Jain ರವರಿಗೆ ನೀವು ಏನು ಹೇಳಿದಿರಿ? ಅವರ ಮೇಲೆ defamation case ಹಾಕುತ್ತೇವೆಂದು ಹೇಳಿದಿರಿ.

ಶ್ರೀ ಎನ್. ಧರ್ಮಸಿಂಗ್ :- ನಾವು ಕೇಳುವಂಥಾದ್ದು ಹಕ್ಕುಚ್ಯುತಿ ಬಗ್ಗೆ. ಈ ಸದನಕ್ಕೆ ಹಕ್ಕುಚ್ಯುತಿಯಾಗಿದೆ. ಮಾನ್ಯ ಪ್ರಕಾಶ್‌ರವರೆ ಏನು ಹೇಳುತ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ :- L.C.Jain ಬಗ್ಗೆ ಆವೇಶದಿಂದ ನಾನು ಹೇಳಿರುವಂತಹ ಮಾತನ್ನು ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಆರ್ಥಿಕ ತಜ್ಞರಾಗಿ ಅಂಕಿಅಂಶಗಳು ಇರಬಹುದು, ಅವರ ಜೊತೆ ಕುಳಿತು ನಾನು ಮಾತನಾಡುತ್ತೇನೆ. ಒಬ್ಬ ಹಿರಿಯ ಆರ್ಥಿಕ ತಜ್ಞರ ಬಗ್ಗೆ ನಾನು ಆವೇಶದಲ್ಲಿ ಮಾತನಾಡಿದಾಗ ನನಗೆ ಅವತ್ತು ನೋವಾಗಿತ್ತು. ಈ ಅವಕಾಶವನ್ನು ಉಪಯೋಗ ಮಾಡಿಕೊಂಡು ನಾನು

ಆ ರೀತಿ ಆವೇಶಕ್ಕೆ ಒಳಗಾಗಿ ಈ ಮನೆಯಲ್ಲಿ ಇಲ್ಲದಿರುವುದರ ಬಗ್ಗೆ ಮಾತನಾಡಬಾರದಾಗಿತ್ತು. ನಾನು ಅವರ ಜೊತೆ ಮಾತನಾಡುತ್ತೇನೆ. ನಾನು ಆ ಮಾತನ್ನು ವಾಪಸ್ಸು ಪಡೆದಿದ್ದೇನೆ. ಎರಡನೆಯದಾಗಿ ಇದು ಚುನಾವಣೆಗೋಸ್ಕರ ಮಾಡಿರುವುದಲ್ಲ. ನಾವು 40 ತಿಂಗಳು ಅವಧಿಯನ್ನು ಪೂರ್ಣ ಮಾಡುತ್ತೇವೆ. ಇದನ್ನು ನೂರಕ್ಕೆ ನೂರು ಗ್ಯಾರಂಟಿ ಅಂತ ಬರೆದಿಟ್ಟುಕೊಳ್ಳಿ. ಮೊದಲನೆ ಬಜೆಟ್‌ನ್ನು ಇಟ್ಟಾಗ ಇದು ಚುನಾವಣೆ ಬಜೆಟ್ ಎಂದು ಹೇಳಿದಿರಿ. 2ನೇ ಬಜೆಟ್ ಇಟ್ಟಾಗ ಇದನ್ನೂ ಕೂಡ ಚುನಾವಣೆ ಬಜೆಟ್ ಎಂದು ಹೇಳಿದಿರಿ. ಇನ್ನೂ ಎರಡು ಬಜೆಟ್‌ನ್ನು, ನೀವು ಹೀಗೆ ಹೇಳಿಕೊಂಡೇ ಹೋಗಬೇಕು.

ಇವತ್ತು ನಮ್ಮ ಬಜೆಟ್ ಏನಿದೆ ಅದು ಶ್ರೀಸಾಮಾನ್ಯರಿಗೆ ಸಂಬಂಧಪಟ್ಟಂತಹ ಬಜೆಟ್. ನಗರ ಪ್ರದೇಶಕ್ಕೆ ಸಂಬಂಧಪಟ್ಟಂಥಾದ್ದು, ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಪರವಾಗಿರುವಂಥಾದ್ದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪರವಾಗಿ ಇರುವಂಥಾದ್ದು. ಈ ಬಜೆಟ್‌ನ ಪರಿಣಾಮ ನಾಳೆ ಪುರಸಭೆ. ನಗರ ಸಭೆ, ಮಹಾ ನಗರಸಭೆಗಳಲ್ಲಿ, ಮಾನ್ಯ ಧರ್ಮಸಿಂಗ್‌ರವರು ಯಾವ ಕಿವಿಮಾತನ್ನು ಮಾನ್ಯ ಯಡಿಯೂರಪ್ಪನವರೆ, ನೀವು ಎಲ್ಲಿದ್ದೀರಾ? ಎಂದು ನನಗೆ ಹೇಳಿದರು. ಬಿಜೆಪಿ, ಜೆಡಿಎಸ್, ಶಾಸಕರು ನಿಮ್ಮ ಸಲಹೆಯನ್ನು ಸ್ವೀಕಾರ ಮಾಡಿ, ನಮ್ಮ ಜಾಗದಲ್ಲಿ ನಿಮ್ಮನ್ನು ಇಟ್ಟು, ನಾವು ನಿಮ್ಮ ಜಾಗದಲ್ಲಿ ಪುರಸಭೆ, ನಗರಸಭೆಗಳಲ್ಲಿ ಕುಳಿತುಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆನ್ನುವ ಭರವಸೆಯನ್ನು ಕೊಟ್ಟು, ದಯಮಾಡಿ ಇಲ್ಲಿ ಏನೂ ಹಕ್ಕುಚ್ಯುತಿ ಇಲ್ಲ, ಇದನ್ನು ತಳ್ಳಿಹಾಕಿ, ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ :- ಮಾನ್ಯ ಅಧ್ಯಕ್ಷರೆ, ನಾನೂ ಹೇಳುವ ವಿಚಾರವನ್ನು ಕೇಳಿ. ಇವತ್ತು ಚರ್ಚೆ ಪ್ರಾರಂಭವಾಗಿದೆ.

ಅಧ್ಯಕ್ಷರು :- ತಾವು ಇರುವ ವಿಚಾರವನ್ನೆಲ್ಲಾ ಹೇಳಿದ್ದೀರಿ, ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರವನ್ನು ಹೇಳಿದ್ದಾರೆ. ಈಗ ಮತ್ತೆ ಮತ್ತೆ ಅದೇ ವಿಷಯವನ್ನು ಪ್ರಸ್ತಾಪ ಮಾಡುತ್ತೀರಿ.

(ಗೊಂದಲ)

ಶ್ರೀ ಧರ್ಮಸಿಂಗ್ :- ಮಾನ್ಯ ಅಧ್ಯಕ್ಷರೆ, ನಮ್ಮ ಚರ್ಚೆ ಏನು ಇದೆ, ಹಕ್ಕುಚ್ಯುತಿ ಏನು ಆಗಿದೆ, ಅದಕ್ಕೆ ಸರ್ಕಾರದಿಂದ ಸರಿಯಾದ ಉತ್ತರ ಬಂದಿಲ್ಲ.

ಈ ಸರ್ಕಾರಕ್ಕೆ ಕ್ರಮಬದ್ಧವಾಗಿ, ನಡೆಸುವಂಥಾದ್ದು ಕೂಡ ಇಲ್ಲ. ಅದಕ್ಕೆ ನಾವು ಸರಿಯಾದ ಪ್ರಕಟಣೆಯನ್ನು ಕೊಟ್ಟು, ರಾಜ್ಯದ ಜನತೆಗೆ ಇವತ್ತು ಹೇಳುವಂಥ ವಿಚಾರಗಳು, ಗಂಗಾವತಿಯಲ್ಲಿ ಏನೇನು ಹೇಳಿದ್ದೀರಿ, ರಾಯಚೂರಿನಲ್ಲಿ ಹೇಳಿದ್ದೀರಿ, ದಾವಣಗೆರೆಯಲ್ಲಿ ಹೇಳಿದ್ದೀರಿ. ನಾವು ಕೂಡ ಬರುತ್ತೇವೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರೆ, ಇನ್ನು ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಶಕ್ತಿಯುತವಾಗಿದೆ. ನಿಮ್ಮನ್ನು ಎದುರಿಸುತ್ತೇವೆಂದು ಹೇಳಿ, ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಪಿ. ರೇಣುಕಾಚಾರ್ಯ :– ಸನ್ಮಾನ್ಯ ಅಧ್ಯಕ್ಷರೆ, ಹಕ್ಕುಚ್ಯುತಿಯಾಗಿಲ್ಲ.

ಒಬ್ಬ ಮಾನ್ಯ ಸದಸ್ಯರು :– ರಾಜ್ಯದಲ್ಲಿ ಕಾಂಗ್ರೆಸ್ ದಿವಾಳಿ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ. ತಾವು ತೀರ್ಪು ಈಗ ಕೊಡುತ್ತೀರಾ. ಅಥವಾ ಆಮೇಲೆ ಕೊಡುತ್ತೀರಾ?

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೆ, ತಮ್ಮ ರೂಲಿಂಗ್ ಏನು ಎಂದು ಹೇಳಿ.

ಅಧ್ಯಕ್ಷರು :– ನನ್ನ ರೂಲಿಂಗ್ ಅನ್ನು ಕಾದಿರಿಸಿದ್ದೇನೆ. ಎಲ್ಲರ ವಾದವನ್ನು ಕೇಳಿದ್ದೇನೆ, ರೂಲಿಂಗ್ ಅನ್ನು ಕಾದಿರಿಸಿದ್ದೇನೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :–

ಅ) ವಿಷಯ :– ರಾಷ್ಟ್ರಧ್ವಜಕ್ಕೆ ಮತ್ತು ರಾಷ್ಟ್ರಗೀತೆಗೆ ಅವಮಾನವಾಗುವಂಥಾ ರೀತಿ ನಡೆದ ಘಟನೆ :

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಮಾನ್ಯ ನಾರಾಯಣಮೂರ್ತಿಯವರ ಬಗ್ಗೆ ಕೇಳಿದಾಗ, ಮಾನ್ಯ ಗೃಹ ಸಚಿವರು, ಈ ಸದನಕ್ಕೆ ಒಂದು ವರದಿಯನ್ನು ಕೊಡುತ್ತೇವೆಂದು ನಿನ್ನೆ ಸದನದಲ್ಲಿ ಹೇಳಿದ್ದರು. ತಾವು ತಮ್ಮ ಪೀಠದಲ್ಲಿದ್ದಾಗ, ನಾರಾಯಣಮೂರ್ತಿಯವರು